ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್. 0821-3419363/24193011

e-mail registrar@Uni-mysore-ac-
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು
ದಿನಾಂಕ 24-02-2025

ಸಂಖ್ಯೆ: ಯುಎ.1/196/2024-25

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,

ಮಾನ್ಯರೆ,

ದಿನಾಂಕ:13.02.2025ರಂದು ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

Lingaraju 24/02/25

ಉಪ ಕುಲಸಚಿವ(ಪ್ರಾಧಿಕಾರ)

ಪ್ರತಿ:

1. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,
2. ನಿರ್ದೇಶಕರು, ಪಿ.ಎಂ.ಇ.ಬಿ., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

} ನಡವಳಿಯನ್ನು ಲಗತ್ತಿಸಲಾಗಿದೆ.

## ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 13-02-2025ರ ಗುರುವಾರ, ಪೂರ್ವಾಹ್ನ 11.30 ಗಂಟೆಗೆ ನಡೆದ "ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆ"ಯ ನಡಾವಳಿ.**

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು | – ಅಧ್ಯಕ್ಷರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಶ್ರೀ ಶೇಖರ್, ಜಂಟಿ ನಿರ್ದೇಶಕರು, ಬೆಂಗಳೂರು | – ಸದಸ್ಯರು |
| 3. | ಡಾ. ಟಿ.ಆರ್. ಚಂದ್ರಶೇಖರ್ | – ಸದಸ್ಯರು |
| 4. | ಶ್ರೀ ಕೆ. ಗೋಕುಲ್ ಗೋವರ್ಧನ್ | – ಸದಸ್ಯರು |
| 5. | ಡಾ. ಅಂತೋನಿ ಪೌಲ್ ರಾಜ್ ಸಿ. | – ಸದಸ್ಯರು |
| 6. | ಡಾ. ಎಂ. ಪುಷ್ಪವತಿ | – ಸದಸ್ಯರು |
| 7. | ಡಾ. ಮಹೇಶ್ ಟಿ.ಬಿ. | – ಸದಸ್ಯರು |
| 8. | ಡಾ. ಬಿ.ಆರ್. ಜಯಕುಮಾರಿ | – ಸದಸ್ಯರು |
| 9. | ಶ್ರೀ ಮಹದೇಶು | – ಸದಸ್ಯರು |
| 10. | ಶ್ರೀ ನಾಗರಾಜು ಸಿ. | – ಸದಸ್ಯರು |
| 11. | ಡಾ. ಬಸವರಾಜು ಸಿ. | – ಸದಸ್ಯರು |
| 12. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ | – ಸದಸ್ಯರು |
| 13. | ಡಾ. ಶಿಲ್ಪ ಜೆ. | – ಸದಸ್ಯರು |
| 14. | ಡಾ. ನಟರಾಜು ಹೆಚ್.ಎಸ್. | – ಸದಸ್ಯರು |
| 15. | ಡಾ. ಎನ್. ನಾಗರಾಜ, ಕುಲಸಚಿವ (ಪರೀಕ್ಷಾಂಗ) | – ಸದಸ್ಯರು |
| 16. | ಶ್ರೀಮತಿ ಸವಿತಾ ಎಂ.ಕೆ., ಕುಲಸಚಿವರು | – ಸದಸ್ಯ ಕಾರ್ಯದರ್ಶಿ |
| 17. | ಶ್ರೀಮತಿ ರೇಖಾ ಕೆ.ಎಸ್., ಹಣಕಾಸು ಅಧಿಕಾರಿ | – ವಿಶೇಷ ಆಹ್ವಾನಿತರು |
| 18. | ಪ್ರೊ. ಆನಂದ್ ಡಿ. | – ವಿಶೇಷ ಆಹ್ವಾನಿತರು |

**ಅನುಪಸ್ಥಿತರು**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ. ಇವರ ಪರವಾಗಿ ಪ್ರೊ. ಎ.ಹೆಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಗೌರವಾನ್ವಿತ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ ಮಾನ್ಯ ಕುಲಪತಿಯವರು ಹೊಸದಾಗಿ ಕುಲಸಚಿವರಾಗಿ (ಆಡಳಿತ) ನೇಮಕಗೊಂಡಿರುವ ಶ್ರೀಮತಿ ಸವಿತಾ ಎಂ.ಕೆ. ಕೆ.ಎ.ಎಸ್ (ಹಿರಿಯ ಶ್ರೇಣಿ), ಕರ್ನಾಟಕ ಸರ್ಕಾರ ಇವರನ್ನು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಹಾಗೂ ಶ್ರೀ ಶೇಖರ್, ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರುಗಳನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು

ಹಾಗೂ ಇದುವರೆವಿಗೂ ಸಿಂಡಿಕೇಟ್ ಸದಸ್ಯ ಕಾರ್ಯದರ್ಶಿಯಾಗಿ ಕುಲಸಚಿವ (ಆಡಳಿತ)ರಾಗಿದ್ದ ಶ್ರೀಮತಿ ವಿ.ಆರ್. ಶೈಲಜ, ಕೆಎಎಸ್., (ಆಯ್ಕೆ ಶ್ರೇಣಿ) ಇವರು ಸೇವೆ ಸಲ್ಲಿಸಿ ವರ್ಗಾವಣೆಗೊಂಡಿರುವುದರಿಂದ ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ಮಾನ್ಯ ಕುಲಪತಿಗಳು ಸಭೆಯ ಕಾರ್ಯಸೂಚಿಗಳನ್ನು ಪ್ರಾರಂಭಿಸುವ ಮುನ್ನ ಪ್ರಾಸ್ತಾವಿಕವಾಗಿ ಈ ಕೆಳಕಂಡ ವಿಷಯಗಳನ್ನು ಸಭೆಯ ಗಮನಕ್ಕೆ ತಂದರು.

- ದಿನಾಂಕ: 26-01-2025ರಂದು ನವದೆಹಲಿಯಲ್ಲಿ ಜರುಗಿದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾದ ಶ್ರೀ ಯೋಗೀಶ್ ಅವರು ಭಾಗವಹಿಸಿ, ಘನತೆವೆತ್ತ ರಾಷ್ಟ್ರಪತಿಗಳಿಗೆ ಗೌರವ ವಂದನೆಗಳನ್ನು ಸಲ್ಲಿಸಿರುತ್ತಾರೆ. ಹಾಗೆಯೇ ಬೆಂಗಳೂರಿನಲ್ಲಿ ಜರುಗಿದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ 04 ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಭಾಗವಹಿಸಿ, ಘನತೆವೆತ್ತ ರಾಜ್ಯಪಾಲರಿಗೆ ಗೌರವ ವಂದನೆಯನ್ನು ಸಲ್ಲಿಸಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಪರವಾಗಿ ಹಾಗೂ ಸಿಂಡಿಕೇಟ್‌ನ ಪರವಾಗಿ ಅಭಿನಂದನೆಯನ್ನು ಸಲ್ಲಿಸಲಾಯಿತು.
- ಗುಣಮಟ್ಟದ ಸಂಶೋಧನಾ ಆಧಾರಿತ ಉನ್ನತ ಶಿಕ್ಷಣಕ್ಕೆ ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ (ANRF) ಅನ್ನು ಮಾನ್ಯ ಪ್ರಧಾನ ಮಂತ್ರಿಯವರ ಬದ್ಧತೆಯಿಂದ Partnerships for Accelerated Innovation and Research (PAIR) Program (ವೇಗವರ್ಧಿತ ನಾವೀನ್ಯತೆ ಮತ್ತು ಸಂಶೋಧನೆಗಾಗಿ ಪಾಲುದಾರಿಕೆ ಕಾರ್ಯಕ್ರಮ) ಅನ್ನು ರೂಪಿಸಿದ್ದು, ಈ ಕಾರ್ಯಕ್ರಮವು ಮುಂದುವರೆದ ವಿಶ್ವವಿದ್ಯಾನಿಲಯಗಳೊಂದಿಗೆ ಅಂದರೆ ನ್ಯಾಕ್‌ನಲ್ಲಿ ಉತ್ತಮ ಶ್ರೇಯಾಂಕವನ್ನು ಹೊಂದಿರುವ ಇತರ ಸಂಸ್ಥೆ/ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ರೂಪಿಸುವಂತದ್ದಾಗಿರುತ್ತದೆ. ಈ ಕಾರ್ಯಕ್ರಮದಲ್ಲಿ 3-4 ವಿಶ್ವವಿದ್ಯಾನಿಲಯಗಳು ಒಟ್ಟಾಗಿ ಸೇರಿ ಸಂಶೋಧನೆಯನ್ನು ನಡೆಸುವ ಯೋಜನೆಯಾಗಿದ್ದು, ಈ ಯೋಜನೆಗೆ ರೂ.100/- ಕೋಟಿಗಳ ಅನುದಾನವನ್ನು ಕೇಂದ್ರ ಸರ್ಕಾರವು ಮೀಸಲಿರಿಸಿದೆ. ಈ ಸಂಬಂಧ ಆನ್‌ಲೈನ್ ಮೂಲಕ ಆಯೋಜಿಸಲಾದ ಸಭೆಯಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಮುಂದುವರೆದ ವಿಶ್ವವಿದ್ಯಾನಿಲಯಗಳು ರೋಬೋಟಿಕ್ಸ್ ತಂತ್ರಜ್ಞಾನವುಳ್ಳ ಮತ್ತು ಕೃತಕ ಬುದ್ಧಿಮತ್ತೆ ಮೇಲೆ ಸಂಶೋಧನೆಯನ್ನು ಕೈಗೊಳ್ಳಲು ಉತ್ಸುಕರಾಗಿದ್ದು, ಸದರಿ ರೋಬೋಟಿಕ್ಸ್ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯ ಮೇಲೆ ಸಂಶೋಧನೆಯನ್ನು ನಡೆಸುವುದರ ಬದಲಾಗಿ ಮೈಸೂರು ವಿಶ್ವವಿದ್ಯಾನಿಲಯವು ಮಣಿಪಾಲ್ ವಿಶ್ವವಿದ್ಯಾನಿಲಯದೊಂದಿಗೆ ವಿಶ್ವವಿದ್ಯಾನಿಲಯ ಸ್ಥಳೀಯ ಮಟ್ಟದಲ್ಲಿ ಬಲಿಷ್ಠವಾಗಿರುವ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ಆಧಾರಿತ ವಿಷಯಗಳ ಮೇಲೆ ಆಯ್ದ ಪ್ರಾಧ್ಯಾಪಕರುಗಳೊಂದಿಗೆ ಅಂದಾಜು ರೂ.15/- ಕೋಟಿಗಳ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಲ್ಲಿಸಲಾಗಿದ್ದು, ಸದ್ಯದಲ್ಲಿಯೇ ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ presentation ಅನ್ನು ಕೈಗೊಳ್ಳಲಾಗುವುದು. ಸದರಿ ಪ್ರಸ್ತಾವನೆಯು ಅಂಗೀಕಾರವಾದಲ್ಲಿ, ವಿಶ್ವವಿದ್ಯಾನಿಲಯಕ್ಕೆ ರೂ.15/- ಕೋಟಿಗಳ ಯೋಜನೆಯು ದೊರಕಲಿದ್ದು, ಈ ಯೋಜನೆಯಿಂದ ರಾಷ್ಟ್ರಮಟ್ಟದಲ್ಲಿ ವಿಶ್ವವಿದ್ಯಾನಿಲಯವು ಗುರುತಿಸಿಕೊಳ್ಳಲು ಬಹಳ ಸಹಕಾರಿಯಾಗುತ್ತದೆ.

ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ, ಈ ಕೆಳಕಂಡ ಕಾರ್ಯಸೂಚಿಗಳನ್ನು ಕುಲಸಚಿವರು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ದಿನಾಂಕ : 21-12-2024ರಂದು ಜರುಗಿದ "ಎಂಟನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರೀಸುವ ಬಗ್ಗೆ. | |
| | ಕುಲಸಚಿವರು ಮಾತನಾಡಿ, ದಿನಾಂಕ : 21.12.2024ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಯನ್ನು ದೃಢೀಕರಿಸಲು ಹಾಗೂ ಸದರಿ ನಡಾವಳಿಯ ಬಗ್ಗೆ ಚರ್ಚೆಗಳೇನಾದರೂ ಇದ್ದಲ್ಲಿ ಚರ್ಚಿಸಬಹುದೆಂದು ಸಭೆಗೆ ತಿಳಿಸಿದರು. |

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ದಿನಾಂಕ: 21.12.2024 ರಂದು ನಡೆದ ಸಭೆಯ ನಡಾವಳಿಯಲ್ಲಿ ವಿಷಯ ಸಂಖ್ಯೆ: 2024/8.12ರ ವಿಷಯಕ್ಕೆ ಸಂಬಂಧಿಸಿದಂತೆ ಅಂದು ನಾನು ಮಾತನಾಡಿರುವ ವಿಷಯವೇ ಬೇರೆ, ತಾವು ನಡಾವಳಿಯಲ್ಲಿ ಹೇಳಿರುವಂತಹ ವಿಷಯವೇ ಬೇರೆಯಾಗಿದೆ. ಪ್ರತಿ ಸಭೆಯಲ್ಲೂ ನಡಾವಳಿಯಲ್ಲಿ ಆಗುವಂತಹ ಲೋಪದೋಷಗಳ ಬಗ್ಗೆ ದೂರನ್ನು ನೀಡುತ್ತಲೇ ಬಂದಿದ್ದೇನೆ. ಸಭೆಯಲ್ಲಿ ಯಾವ ವಿಷಯವನ್ನು ಮಾತನಾಡುತ್ತೇವೋ ಅದನ್ನೇ ಯಥಾವತ್ತಾಗಿ ದಾಖಲಿಸಬೇಕೆಂದು ತಿಳಿಸುತ್ತಾ, 2014/8.12ರ ವಿಷಯದಲ್ಲಿ ಹಾಸನ ಸ್ನಾತಕೋತ್ತರ ಕೇಂದ್ರವು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿರುವುದರಿಂದ ಹಾಗೂ ಹಿರಿಯ ಪ್ರಾಧ್ಯಾಪಕರೂ ಆಗಿರುವಂತಹ ಪ್ರೊ. ಬಿ. ಮಹಾದೇವಪ್ಪರವರ ಹೆಸರು ಬಿಟ್ಟು ಹೋಗಿರುವುದರಿಂದ ಅವರನ್ನು ವಿಶ್ವವಿದ್ಯಾನಿಲಯದ ಕ್ಯಾಲೆಂಡರ್ ಆಫ್ ಇವೆಂಟ್ಸ್‌ನ 2025ರ ನಿವೃತ್ತಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವಂತೆಯೂ ತಿಳಿಸಲಾಗಿತ್ತು. ಹಾಸನ ವಿಶ್ವವಿದ್ಯಾನಿಲಯ ವೆಂದು ನಮೂದಿಸಿರುತ್ತೀರಿ. ಜೊತೆಗೆ ಮೂರು ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಆದಂತಹ ತೀರ್ಮಾನದ ಆದೇಶವನ್ನು ಸಭೆಯ ಮುಂದೆ ಮಂಡಿಸಿರುತ್ತೀರಿ. ಆದರೆ ಪ್ರೊ. ಬಿ. ಮಹಾದೇವಪ್ಪರವರು ಘನ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿರುವುದರಿಂದ ಇವರಿಗೆ ಇದು ಅನ್ವಯವಾಗುವುದಿಲ್ಲ. ಆದರೆ ನಡಾವಳಿಯಲ್ಲಿ ಪ್ರೊ. ಬಿ. ಮಹಾದೇವಪ್ಪ, ಪ್ರಾಧ್ಯಾಪಕರು, ಹಾಸನ ವಿಶ್ವವಿದ್ಯಾನಿಲಯವೆಂದು ನಮೂದಿಸಿದ್ದೀರಿ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿಯನ್ನು ಕೊಟ್ಟಿರುವುದಾಗಿ ತಿಳಿಸುತ್ತಾ, ನಡಾವಳಿಯಲ್ಲಿ ನಮೂದಿಸಿರುವಂತೆ ವಿಷಯವನ್ನು ವಿಶೇಷ ಪ್ರಕರಣವೆಂದು ನಾನು ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಪ್ರೊ. ಬಿ. ಮಹಾದೇವಪ್ಪ, ಪ್ರಾಧ್ಯಾಪಕರು, ಹಾಸನ ವಿಶ್ವವಿದ್ಯಾನಿಲಯವೆಂದು ನಮೂದಿಸಿರುವುದನ್ನು ಪ್ರೊ. ಬಿ. ಮಹಾದೇವಪ್ಪ, ಪ್ರಾಧ್ಯಾಪಕರು, ಹಾಸನ ಸ್ನಾತಕೋತ್ತರವೆಂದು ತಿದ್ದುಪಡಿ ಮಾಡಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡುತ್ತಾ, ಸರ್ಕಾರದಿಂದ ಬಂದಿರುವಂತಹ ಆದೇಶವನ್ನು ಸಭೆಯಲ್ಲಿ ಮರುಮಂಡಿಸುತ್ತಾ, ದಿನಾಂಕ 28-11-2024ರಂದು ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಮಂಡ್ಯ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯಗಳ ಆಡಳಿತಾತ್ಮಕ ಸಮಸ್ಯೆಗಳ ಕುರಿತು ಸಭೆಯ ನಡವಳಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಇಡಿ 113 ಯುಎಂವಿ 2024, ಬೆಂಗಳೂರು, ದಿನಾಂಕ 09-12-2024ರ ಪತ್ರ ಮುಖೇನ ಈ ಕಛೇರಿಗೆ ರವಾನಿಸಿದ್ದು ಸದರಿ ನಡವಳಿಯಲ್ಲಿ ತಿಳಿಸಿರುವಂತೆ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕಿಸಲ್ಪಟ್ಟ ಮಂಡ್ಯ, ಹಾಸನ ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳ ಪೈಕಿ ಪದೋನ್ನತಿಗೆ ಅರ್ಹರಿರುವ ಬೋಧಕ/ಬೋಧಕೇತರರ ಮಾಹಿತಿ/ದಾಖಲೆಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು, ಮೈಸೂರು ವಿಶ್ವವಿದ್ಯಾನಿಲಯವು ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅರ್ಹ ಬೋಧಕ/ಬೋಧಕೇತರರಿಗೆ ಪದೋನ್ನತಿ ನೀಡಲು ಅಗತ್ಯ ಕ್ರಮವಹಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತರುತ್ತಾ, ಹಾಸನ ವಿಶ್ವವಿದ್ಯಾಲಯವನ್ನು ಸ್ನಾತಕೋತ್ತರ ಕೇಂದ್ರವೆಂದು ತಿದ್ದುಪಡಿ ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡುತ್ತಾ, ಸರ್ಕಾರದ ಆದೇಶವು ಬರುವ ಮುಂಚೆಯೇ ಡಾ. ಬಿ. ಮಹಾದೇವಪ್ಪ ಅವರು ಘನ ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿರುವುದರಿಂದ ಸರ್ಕಾರದಿಂದ ಬಂದಿರುವ ಆದೇಶವು ಇವರಿಗೆ ಅನ್ವಯವಾಗುವುದಿಲ್ಲವೆಂದು ಹಾಗೂ ನ್ಯಾಯಾಲಯದ ಉಲ್ಲಂಘನೆಯಾಗುತ್ತದೆ ಎಂದು ತಿಳಿಸುತ್ತಾ, ಸರ್ಕಾರದ ಆದೇಶವನ್ನು ಪ್ರಶ್ನಿಸುತ್ತಿಲ್ಲವೆಂದು ತಿಳಿಸಿದರು.

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಬಿ. ಮಹಾದೇವಪ್ಪ ಅವರು ಹಾಸನ ವಿಶ್ವವಿದ್ಯಾನಿಲಯದವರಾಗಿರುವುದರಿಂದ ಹಾಗೂ ಸರ್ಕಾರದ ಆದೇಶದಂತೆ ಮೂರು ಸ್ನಾತಕೋತ್ತರ ಕೇಂದ್ರಗಳು ಮೂರು ವಿಶ್ವವಿದ್ಯಾನಿಲಯಗಳಾಗಿರುವುದರಿಂದ ಯಾವುದೇ ರೀತಿಯ ನ್ಯಾಯಾಲಯದ ಉಲ್ಲಂಘನೆಯಾಗುವುದಿಲ್ಲವೆಂದು ಸಭೆಗೆ ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಪ್ರೊ. ಬಿ. ಮಹಾದೇವಪ್ಪ, ಪ್ರಾಧ್ಯಾಪಕರು ಇವರು ದಿನಾಂಕ: 19.02.2025ರಂದು ಸೇವೆಯಿಂದ ನಿವೃತ್ತಿ ಹೊಂದುತ್ತಿರುವುದರಿಂದ ಅವರಿಗೆ ಹಿರಿಯ ಪ್ರಾಧ್ಯಾಪಕರಾಗಿ ಮುಂಬಡ್ತಿಯನ್ನು ನೀಡಬೇಕೆಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಎಲ್ಲಾ ಹಿರಿಯ ಶ್ರೇಣಿಯ ಪ್ರಾಧ್ಯಾಪಕರುಗಳಿಗೆ ಹಂತಹಂತವಾಗಿ ಬಡ್ತಿಯನ್ನು ನೀಡುತ್ತಿರುವುದಾಗಿಯೂ, ವಿಷಯ ತಜ್ಞರು ಸಿಕ್ಕಿದ ಕೂಡಲೇ ಪ್ರೊ. ಬಿ. ಮಹಾದೇವಪ್ಪ ಅವರು ದಿನಾಂಕ : 30.04.2025ರಂದು ನಿವೃತ್ತಿಯಾಗುವುದರೊಳಗೆ ಹಿರಿಯ ಪ್ರಾಧ್ಯಾಪಕರಾಗಿ ಬಡ್ತಿಯನ್ನು ನೀಡಿ, ಮುಂದಿನ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸುವುದಾಗಿಯೂ ಹಾಗೂ ಯಾವುದೇ ಪ್ರಾಧ್ಯಾಪಕರುಗಳಿಗೂ ಅನ್ಯಾಯವಾಗದಂತೆ ಕ್ರಮವಹಿಸಿ ಬಡ್ತಿಯನ್ನು ನೀಡುತ್ತಿರುವುದಾಗಿ ತಿಳಿಸಿದರು.<br><br>ಪ್ರೊ. ಶಬೀರ್ ಮೊಹಮ್ಮದ್ ಮುಸ್ತಾಫ ಅವರು ಮಾತನಾಡುತ್ತಾ, ಹೊಸದಾಗಿ ವಿಶ್ವವಿದ್ಯಾನಿಲಯದ ಕುಲಸಚಿವರಾಗಿರುವುದಕ್ಕೆ ಶ್ರೀಮತಿ ಎಂ.ಕೆ. ಸವಿತಾ ಅವರನ್ನು ಅಭಿನಂದಿಸಿದರು. ಹಾಗೂ ನಿವೃತ್ತಿ ಹಂಚಿನಲ್ಲಿರುವ ಎಲ್ಲಾ ಪ್ರಾಧ್ಯಾಪರುಗಳಿಗೆ ಹಿರಿಯ ಶ್ರೇಣಿಯ ಪ್ರಾಧ್ಯಾಪಕರಾಗಿ ಬಡ್ತಿಯನ್ನು ನೀಡಬೇಕೆಂದು ತಿಳಿಸುತ್ತಾ, ಹಿಂದೆ ಹಲವಾರು ಪ್ರಾಧ್ಯಾಪಕರುಗಳು ಬಡ್ತಿಯನ್ನು ಪಡೆಯದೆ ನಿವೃತ್ತರಾಗಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳಿಗೆ ಹಿರಿಯ ಪ್ರಾಧ್ಯಾಪಕರುಗಳಾಗಿ ಬಡ್ತಿಯನ್ನು ಹಂತ ಹಂತವಾಗಿ ನೀಡಲು ಕ್ರಮಕೈಗೊಳ್ಳುತ್ತಿರುವುದಾಗಿ ತಿಳಿಸಿದರು.<br><br>ದಿನಾಂಕ: 21.12.2024 ರಂದು ನಡೆದ ಸಭೆಯ ನಡಾವಳಿಯಲ್ಲಿನ ಇತರೆ ವಿಷಯ 4ಕ್ಕೆ ಸಂಬಂಧಿಸಿದಂತೆ, ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ 43 ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳ ವಿಷಯವಾಗಿ ಯಾವ ಕ್ರಮವನ್ನು ಕೈಗೊಂಡಿದ್ದೀರಿ ಹಾಗೂ ಸದರಿ ನೌಕರರುಗಳು 6-8 ತಿಂಗಳಿಂದ ವೇತನವಿಲ್ಲದೆ ಕರ್ತವ್ಯವನ್ನು ನಿರ್ವಹಿಸುತ್ತಿರುವುದರಿಂದ, ಅವರ ಜೀವನಕ್ಕೆ ತೊಂದರೆಯಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು. ಸದರಿ ವಿಷಯಕ್ಕೆ ಶ್ರೀ ಗೋಕುಲ್ ಗೋವರ್ಧನ್ ಅವರು ದನಿಗೂಡಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಹಿಂದೆ ಯುವರಾಜ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪ್ರೊ. ಸೋಮಶೇಖರ್ ಅವರು ಹಠಾತ್ತನೆ ನಿಧನರಾಗಿದ್ದರಿಂದ, ಯಾವುದೇ ಸಮಿತಿಯನ್ನು ರಚಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಪ್ರೊ. ಎಂ. ಮಹಾದೇವಮೂರ್ತಿಯವರು ಯುವರಾಜ ಕಾಲೇಜಿನ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, Board of Governing ಕರೆದು, ಅತಿ ಶೀಘ್ರವಾಗಿ ಯುವರಾಜ ಕಾಲೇಜಿನ ಸಮಸ್ಯೆಯ ಬಗ್ಗೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.<br><br>ಸಿಂಡಿಕೇಟ್‌ನ ಇತರೆ ಸದಸ್ಯರುಗಳು ಸಹ ಯುವರಾಜ ಕಾಲೇಜಿನ ಎಲ್ಲಾ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವಂತೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜು ಸ್ವಾಯತ್ತ ಕಾಲೇಜು ಆಗಿರುವುದರಿಂಧ 43 ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ವಿಷಯವನ್ನು ತರದೆ ಅವರೇ ನೇರವಾಗಿ ಉದ್ಯೋಗಿಗಳನ್ನು ನೇಮಕಾತಿ ಮಾಡಿಕೊಂಡಿರುತ್ತಾರೆ. ಇದರಿಂದ ಆಡಿಟ್ ಆಕ್ಷೇಪಣೆಯಾಗಿದೆ. ಆದ್ದರಿಂದ ಸದರಿಯವರನ್ನು |

| | |
|---|---|
| | ಯಾವರೀತಿ ತರ್ಕಬದ್ಧಗೊಳಿಸುವುದು ಎಂಬುದರ ಬಗ್ಗೆ ಚಿಂತನೆ ನಡೆಸಲಾಗಿದೆ.<br><br>ಶ್ರೀ ಮಹಾದೇಶು ಅವರು ಮಾತನಾಡಿ, ಕಾನೂನಾಗಲಿ, ನಿಯಮಗಳಾಗಲಿ ಪ್ರಾಂಶುಪಾಲರಿಗೆ ಅರಿವಿರಬೇಕಾದ ವಿಷಯವಾಗಿರುತ್ತದೆ. ಯಾರೇ ಹೊಸದಾಗಿ ನೇಮಕಾತಿ ಹೊಂದಿದ ಉದ್ಯೋಗಿಗಳಿಗೆ ಇದರ ಬಗ್ಗೆ ಮಾಹಿತಿ ಇರುವುದಿಲ್ಲ. ಯಾರೋ ಮಾಡಿದ ತಪ್ಪಿಗೆ 15-20 ವರ್ಷಗಳಿಂದ ಸೇವೆ ಸಲ್ಲಿಸಿರುವ ಉದ್ಯೋಗಿಗಳಿಗೆ ಶಿಕ್ಷೆ ನೀಡುವುದು ಯಾವ ರೀತಿಯ ಕ್ರಮ ಎಂದು ಪ್ರಶ್ನಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸದರಿ ಉದ್ಯೋಗಿಗಳಿಗೆ ನೇಮಕಾತಿ ಆದೇಶವನ್ನೇ ನೀಡದೇ ಅವರಿಂದ ಸೇವೆಯನ್ನು ಪಡೆಯುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ವಿಷಯಕ್ಕೆ ಆಡಿಟ್ ಆಕ್ಷೇಪಣೆ ಇರುವುದರಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರಾಗಲಿ, ಅಥವಾ ಹಿಂದೆ ಇದ್ದಂತಹ ಪ್ರಾಂಶುಪಾಲರಾಗಲಿ ಕ್ರಮವನ್ನು ವಹಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು.<br><br>ಶ್ರೀ ಮಹದೇಶು ಅವರು ಮಾತನಾಡಿ ಸದರಿ ಉದ್ಯೋಗಿಗಳಿಗೆ 6-7 ತಿಂಗಳಿಂದ ಅವರಿಂದ ಸೇವೆಯನ್ನು ಪಡೆದು ವೇತನವನ್ನು ನೀಡದೆ ಇದ್ದಲ್ಲಿ ಅವರ ಜೀವನ ನಿರ್ವಹಣೆ ಮಾಡಲು ಹೇಗೆ ಸಾಧ್ಯ? ಆದ್ದರಿಂದ ಇದರ ಬಗ್ಗೆ ಅತೀ ಶೀಘ್ರವಾಗಿ ಕ್ರಮಕೈಗೊಳ್ಳಬೇಕೆಂದು ಸಭೆಗೆ ತಿಳಿಸಿದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ, ಬೋರ್ಡ್ ಆಫ್ ಗವರ್ನಿಂಗ್ ಸಭೆಯನ್ನು ಅತೀ ಶೀಘ್ರವಾಗಿ ಕರೆದು ಮಾನವೀಯತೆ ದೃಷ್ಟಿಯಿಂದ ಸಾಧಕ-ಬಾಧಕವನ್ನು ಚರ್ಚಿಸಿ, ಸದರಿ ಉದ್ಯೋಗಿಗಳಿಗೆ ನ್ಯಾಯವನ್ನು ದೊರಕಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ತಿಳಿಸಿದರು. |
| **ತೀರ್ಮಾನ** | **21-12-2024ರಂದು ಜರುಗಿದ "ಎಂಟನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು.** |
| **ಸಾಮಾನ್ಯ ಸಭೆ 2025/1.1** | 2025-26ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳಿಗೆ ಸ್ಥಳೀಯ ವಿಚಾರಣಾ ಸಮಿತಿಗಳು ಭೇಟಿ ನೀಡಿ ಸಲ್ಲಿಸಿರುವ ಸಂಯೋಜನ ವರದಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗೆಗೆ. |
| | ಪ್ರೊ. ಆನಂದ್.ಡಿ., ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ಮಾನಸಗಂಗೋತ್ರಿ, ಮೈಸೂರು ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಗೆ 2025-26ನೇ ಶೈಕ್ಷಣಿಕ ಸಾಲಿಗೆ ಹಾಲಿ ಅಸ್ತಿತ್ವದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು/ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು /ವಿಷಯಗಳು/ ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ ನವೀಕರಿಸಲು ಹಾಗೂ ಹಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು/ಸಂಪೂರ್ಣ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳನ್ನು ನವೀಕರಿಸಲು/ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು/ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಹಾಲಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ಯುಜಿಸಿ ಆ್ಯಡ್‌ಆನ್ ಕೋರ್ಸುಗಳನ್ನು ಮುಂದುವರೆಸಲು /ಹಾಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗೆಗೆ ಸ್ಥಳೀಯ ವಿಚಾರಣಾ ಸಮಿತಿಯವರು ಕಾಲೇಜುಗಳಿಗೆ ಭೇಟಿ ನೀಡಿ ಭೌತಿಕವಾಗಿ ಪರಿಶೀಲಿಸಿ ಸಲ್ಲಿಸಿರುವ ಆನ್‌ಲೈನ್ ವರದಿಯನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುತ್ತಿದ್ದೇನೆ ಎಂದು ತಿಳಿಸಿದರು. |

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59ರ ಮೇರೆಗೆ ಕೆಳಕಂಡಂತೆ ಕಾಲೇಜುವಾರು/ಶಿಕ್ಷಣ ಸಂಸ್ಥೆಗಳು ಸಂಯೋಜನೆಯನ್ನು ಮುಂದುವರೆಸಲು, ಹೊಸದಾಗಿ ಸಂಯೋಜನೆ ನೀಡಲು, ಪ್ರವೇಶಾತಿ ಹೆಚ್ಚಳ ಮಾಡಲು, ಶಾಶ್ವತ ಸಂಯೋಜನೆ ನೀಡಲು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿದ ವಿಚಾರಣಾ ಸಮಿತಿಗಳು ಶಿಫಾರಸು ಮಾಡಿರುವ ಈ ಕೆಳಕಂಡ ಕಾಲೇಜುಗಳ ವಿವರ ಮತ್ತು ಪಟ್ಟಿಯನ್ನು ಸಭೆಯಲ್ಲಿ ಮಂಡಿಸಿದರು.

**I. 2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು ಶಿಫಾರಸು ಮಾಡಿರುವ ಕಾಲೇಜುಗಳ ವಿವರ: 82**

| **ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು** | | | |
|---|---|---|---|
| **ಕ್ರಮ ಸಂಖ್ಯೆ** | **ಕಾಲೇಜಿನ ಹೆಸರು ಮತ್ತು ಸ್ಥಳ** | **ಶಾಶ್ವತ ಸಂಯೋಜನೆ ಹೊಂದಿರುವ ಕೋರ್ಸುಗಳು** | **ತಾತ್ಕಾಲಿಕ ಸಂಯೋಜನೆ ಮುಂದುವರಿಕೆ ನೀಡಿರುವ ಕೋರ್ಸುಗಳ ವಿವರ** |
| 1. | ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು | B.A. | B.A.,BCA, PG.-M.A. – Economics, Sociology, English, Kannada, Political Science, History, M.Sc-geography, Psychology |
| 2. | ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಮೈಸೂರು | B.Com. | BBA, B.Com. BCA P.G –M.Com, MBA |
| 3. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | B.A., B.Sc., B.Com, BBA | B.A., B.Sc., B.Com |
| 4. | ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು, ಕುವೆಂಪುನಗರ, ಮೈಸೂರು | - | B.Com, BCA |
| 5. | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಮೈಸೂರು | B.A., B.Com | B.A., B.Sc., B.Com., BBA, BCA P.G.- M.A.- Kannada |
| 6. | ಚಾಮರಾಜೇಂದ್ರ ದೃಶ್ಯ ಕಲಾ ಕಾಲೇಜು, ಮೈಸೂರು | B.FA | M.FA |
| 7. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥನಗರ, ಮೈಸೂರು | - | B.A. BBA., B.Com, B.Sc, BCA |
| 8. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು | B.A., B.Sc., BBA, B.Com | B.Sc., B.Com. |
| 9. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ನಗರ | B.A., B.Com., BBA., B.Sc | B.A., B.Com., B.Sc P.G.- MSW, M.A- Kannada, M.Com |
| 10. | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ನಗರ | - | B.A., B.Com., BBA., B.Sc P.G.-M.Com, M.Sc-Chemistry |
| 11. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ | - | B.A., BBA., B.Com., B.Sc |
| 12. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ.ಕೋಟೆ | B.A. | B.A., BBA., B.Com, B.Sc |
| 13. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರಗೂರು | - | B.A., BBA., B.Com |
| 14. | ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು | B.A., B.Com. | B.A., B.Sc., BBA, B.Com. BCA P.G.-M.A- Economics, History, Political Science, Kannada, M.Com, M.Sc- Maths, |

| | | | |
|---|---|---|---|
| 15. | ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು | B.A., B.Com | B.A., B.Sc., B.Com., BBA, BCA |
| 16. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೂಡು,ಹುಣಸೂರು ತಾ. | - | B.A., B.Com., BBA |
| 17. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ | B.A., B.Com | B.A., BBA |
| 18. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು | BA., B.Com, B.Sc | B.A. B.Sc., BBA |
| 19. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ | - | B.A. B.Sc., B.Com., BBA |
| 20. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ | B.A. B.Com., BBA | B.A., B.Sc., B.Com, BCA P.G.-M.Com |
| 21. | ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭೈರಾಪುರ ಗ್ರಾಮ, ಟಿ.ನರಸೀಪುರ ತಾ | - | B.A., BBA B.Com., BSW, B.Sc, BCA |
| 22. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಲಕಾಡು, ಟಿ.ನರಸೀಪುರ ತಾ. | - | B.A., B.Com., BBA |
| 23. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಿರಿಯಾಪಟ್ಟಣ | B.A., B.Com. | B.A., BBA B.Com., BCA |
| 24. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟದಪುರ, ಪಿರಿಯಾಪಟ್ಟಣ ತಾ. | - | B.A., B.Com. |
| | **ಮೈಸೂರು ಜಿಲ್ಲೆ ಖಾಸಗಿ ಅನುದಾನಿತ ಕಾಲೇಜುಗಳು** | | |
| 25. | ಶಾರದಾ ವಿಲಾಸ ಕಾಲೇಜು, ಮೈಸೂರು | B.Sc. | B.Sc. B.Com., BBA, BCA P.G.-M.Com, M.Sc-Chemistry |
| 26. | ಬಾಸುದೇವ ಸೋಮಾನಿ ಪ್ರಥಮ ದರ್ಜೆ ಕಾಲೇಜು, ಮೈಸೂರು | B.A., B.Com, BBA | B.A. P.G.-M.Com |
| 27. | ಡಿ. ಬನುಮಯ್ಯ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು | B.Com. | BA., BBA P.G.-M.Com |
| 28. | ಟೆರೇಷಿಯನ್ ಕಾಲೇಜು, ಮೈಸೂರು | B.A., B.Sc., B.Com. | B.A., B.Sc., BBA, B.Com, BCA P.G.-M.Com, M.A- English, M.Sc-Psychology, Biotechnology, Botany |
| 29. | ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು | B.A, B.Com. BBA | B.Com., BCA P.G.-M.Com |
| 30. | ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ನಂಜನಗೂಡು | B.A., B.Sc., B.Com. | B.Sc., B.Com., BBA, BCA |
| 31. | ವಿದ್ಯೋದಯ ಕಲಾ ಮತ್ತು ವಾಣಿಜ್ಯ ಕಾಲೇಜು, ಟಿ. ನರಸೀಪುರ | B.A., B.Com | B.Com. |
| 32. | ಮಲ್ಲಮ್ಮ ಮರಿಮಲ್ಲಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು | B.A.,B.Com | - |
| 33. | ಶ್ರೀ ಚನ್ನಕೇಶವ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ, ಕೆ.ಆರ್.ನಗರ ತಾ., ಮೈಸೂರು ಜಿಲ್ಲೆ | - | BA |

| | | | |
|---|---|---|---|
| **ಮೈಸೂರು ಜಿಲ್ಲೆ ಖಾಸಗಿ ಅನುದಾನರಹಿತ ಕಾಲೇಜುಗಳು** | | | |
| 34. | ಮಲ್ಲಮ್ಮ ಮರಿಮಲ್ಲಪ್ಪ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಮೈಸೂರು | - | B.Sc., BBA |
| 35. | ಜಿ.ಎಸ್.ಎಸ್.ಎಸ್. ಸಿಂಹ ಸುಬ್ಬ ಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥನಗರ, ಮೈಸೂರು | BBA | B.Com., BCA |
| 36. | ಡಿ. ಬನುಮಯ್ಯ ಸಂಜೆ ಕಾಲೇಜು, ಮೈಸೂರು | - | B.Com |
| 37. | ಮೈಸೂರು ಮಕ್ಕಳಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಕಾಲೇಜು, ಮೈಸೂರು | B.Sc., BBA., BCA, B.Com. | BCA<br>P.G.- M.Com |
| 38. | ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Sc, BCA, B.Com, BBA |
| 39. | ಎಂ.ಇ.ಎಸ್. ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA., B.Com |
| 40. | ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ವಸತಿ ಕಾಲೇಜು, ಮೈಸೂರು | B.A | B.Com.,<br>P.G.-M.Com |
| 41. | ಶ್ರೀಕಾಂತ ಮಹಿಳಾ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.Com. |
| 42. | ಟಿ.ಟಿ.ಎಲ್. ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮೈಸೂರು | - | BBA., B.Com<br>P.G.- M.Com |
| 43. | ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.Com., BBA |
| 44. | ವಿದ್ಯಾವಿಕಾಸ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, BCA, B.Com.<br>P.G.- MSW |
| 45. | ಶ್ರೀ ವಾಣಿವಿಲಾಸ ಅರಸು ಮಹಿಳಾ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.Com., BBA, BCA |
| 46. | ಶ್ರೀ ಲಕ್ಷ್ಮೀಹಯಗ್ರೀವ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರು | - | B.Sc., B.Com., BBA |
| 47. | ಬಿಷಪ್ ನಾರ್ಮನ್ ಕಾರ್ ಸಾರ್ಜೆಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮೈಸೂರು | - | BBA, B.Com. |
| 48. | ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, ಮಾನಂದವಾಡಿ, ಮೈಸೂರು | - | BBA, BCA, B.Com.<br>P.G.-M.Com |
| 49. | ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು, ಮೈಸೂರು | B.Com | BBA, B.Com, BCA |
| 50. | ಜ್ಞಾನದೀಪ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, B.Com |
| 51. | ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು | - | B.Sc. BBA, B.Com, BCA |

| | | | | | |
|---|---|---|---|---|---|
| | 52. | ಮೈಸೂರು ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಆರ್ಟ್ಸ್, ಮೇಟಗಳ್ಳಿ, ಮೈಸೂರು | - | BBA, B.Com, BCA | |
| | 53. | ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ಮೈಸೂರು | B.Com | B.Com, BCA | |
| | 54. | ಸೇಫಿಯಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರು | - | BBA, B.Com., BCA | |
| | 55. | ಮೈಸೂರು ಸಿಟಿ ಮೈನಾರಿಟಿ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, B.Com | |
| | 56. | ಬಿ.ಜಿ.ಎಸ್.ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | - | B.Com, B.Sc., BCA, BBA | |
| | 57. | ಹಿಂದೂಸ್ತಾನ್ ಕಾಲೇಜು, ಮೈಸೂರು | - | B.Com, BCA<br>P.G-M.Com | |
| | 58. | ಮಹಾತ್ಮ ಗಾಂಧಿ ಪ್ರಥಮ ದರ್ಜೆ ಕಾಲೇಜು, ಮೈಸೂರು | - | BBA, B.Com. | |
| | 59. | ಶೇಷಾದ್ರಿಪುರಂ ಪದವಿ ಕಾಲೇಜು, ಹೆಬ್ಬಾಳ್, ಮೈಸೂರು | B.Com, BBA, BCA | BCA | |
| | 60. | ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.A., B.C.A., BBA, B.Com. | |
| | 61. | ಸೆಂಟ್ ಜೋಸೆಫ್ ಮಹಿಳಾ ಕಾಲೇಜು, ರಮ್ಮನಹಳ್ಳಿ, ಮೈಸೂರು | - | B.A., BBA, B.Com., BCA, B.Sc | |
| | 62. | ಜೀನಿಯಸ್ ಪ್ರಥಮ ದರ್ಜೆ ಕಾಲೇಜು, ಮೈಸೂರು | | B.Com, BCA | |
| | 63. | ಕ್ರೈಸ್ಟ್ ಕಾಲೇಜು, ಶ್ರೀರಾಂಪುರ, ಮೈಸೂರು | | B.Com, BBA, B.A., B.Sc., BCA | |
| | 64. | ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು,<br>ಹೆಚ್.ಡಿ. ಕೋಟೆ | - | B.A B.Com | |
| | 65. | ಶ್ರೀ ವಿಶ್ವಭಾರತಿ ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ. ಕೋಟೆ | - | B.A B.Com | |
| | 66. | ಸಿಟಿಜನ್ಸ್ ವಿಜ್ಞಾನ, ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಪ್ರಥಮ ದರ್ಜೆ ಕಾಲೇಜು, ನಂಜನಗೂಡು | - | B.Com, BBA | |
| | 67. | ಪಿ.ಆರ್.ಎಂ. ವಿಜಯ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ | - | B.A B.Com | |
| | 68. | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಬನ್ನೂರು | - | B.A B.Com | |
| | 69. | ಭಾರತ ಮಾತಾ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಪಿರಿಯಾಪಟ್ಟಣ ತಾ., ಮೈಸೂರು ಜಿಲ್ಲೆ | - | B.Com, BBA, BCA | |
| | 70. | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಅಬ್ಬೂರು, | - | B.A B.Com | |
| | 71. | ವಿ.ಎಸ್.ಎಸ್. ಪ್ರಥಮ ದರ್ಜೆ ಕಾಲೇಜು,<br>ಸಾಧನಾಪುರ, ರತ್ನಪುರಿ ಕಾಲೋನಿ, ಹುಣಸೂರು ತಾ. | - | B.A | |
| | 72. | ಜ್ಞಾನಧಾರಾ ಪ್ರಥಮ ದರ್ಜೆ ಕಾಲೇಜು, #೫೦, ಕಾಫಿವರ್ಕ್ಸ್ ಆವರಣ, ಹುಣಸೂರು | - | BA., B.Com, BBA, BCA | |

| | | | |
|---|---|---|---|
| 73. | ಸೆಂಟ್ ಜೋಸಫ್ ಕಾಲೇಜು, ಹುಣಸೂರು. | - | B.Com, BCA., BA, B.Sc |
| 74. | ಕಾವೇರಿ ಕಾಲೇಜ್ ಆಫ್ ಲೈಫ್‌ಸೈನ್ಸ್ ಅಂಡ್ ಮ್ಯಾನೇಜ್ ಮೆಂಟ್, ಮೈಸೂರು | - | BBA, BCA<br>P.G-MBA, MCA |
| 75. | ದೇವಲಾ ಮಹರ್ಷಿ ಟ್ರಿನಿಟಿ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Com, BBA, BCA |
| 76. | ದಕ್ಷ ಪ್ರಥಮ ದರ್ಜೆ ಕಾಲೇಜು, ಮೈಸೂರು | - | B.Com, BBA, BCA<br>P.G- MBA, MCA |
| 77. | ಎಂ.ಐ.ಟಿ. ಪದವಿ ಕಾಲೇಜು, ಕೆಸರೆ ಕಸಬಾ ಹೋ., ಮೈಸೂರು ತಾ. & ಜಿಲ್ಲೆ,<br>ಮೈಸೂರು ಪ್ರಥಮ ದರ್ಜೆ ಕಾಲೇಜು, | - | B.Com, BCA |
| 78. | ವಿಕ್ಟರಿ ಪ್ರಥಮ ದರ್ಜೆ ಕಾಲೇಜು, 37/1, ಅಬುಲ್ ಕಲಾಂ ಅಜಾದ ರಸ್ತೆ, ಎನ್.ಆರ್. ಮೊಹಲ್ಲಾ, ಮೈಸೂರು-570007 | - | B.Com, BCA |
| 79. | ಪರಿವರ್ತನ ಬ್ಯುಸಿನೆಸ್ ಸ್ಕೂಲ್, ಕೆ.ಆರ್.ಎಸ್. ರೋಡ್, ಮೈಸೂರು | - | B.Com, BBA, BCA<br>P.G.-MBA, MCA |
| | **ಹೋಟೆಲ್ ಮ್ಯಾನೇಜ್‌ಮೆಂಟ್ ಕಾಲೇಜು** | | |
| 80. | ವಿದ್ಯಾ ವಿಕಾಸ ಇನ್ಸ್‌ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಅಂಡ್ ಕೇಟರಿಂಗ್ ಟೆಕ್ನಾಲಜಿ, ಮೈಸೂರು | - | BBA<br>(Tourism and Hospitality)<br>BBA<br>(Tourism and Travels) |
| | **ಕೇಂದ್ರ ಸರ್ಕಾರದ ವಾಕ್ ಮತ್ತು ಶ್ರವಣ ಸಂಸ್ಥೆ** | | |
| 81. | ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು | - | B.A.SLP, B.Ed.Spl.Ed. (H.I.)-M.Ed.SPL.Ed(HI)<br>M.Sc- Speech Language Pathology, Audiology<br>PG Diploma in Auditory verbal therapy |
| | **ಖಾಸಗಿ ವಾಕ್ ಮತ್ತು ಶ್ರವಣ ಸಂಸ್ಥೆ** | | |
| 82. | ಜೆ.ಎಸ್.ಎಸ್. ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು | - | B.A.SLP<br>P.G-M.Sc- SLP, Audiology |

**II. 2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು ಶಿಫಾರಸು ಮಾಡಿರುವ ಕಾಲೇಜುಗಳ ವಿವರ: 15**

| | | |
|---|---|---|
| | **ಶಿಕ್ಷಣ ಕಾಲೇಜುಗಳು** | |
| 1. | ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ , ಮೈಸೂರು | B.Ed. |
| 2. | ರೀಜನಲ್ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್, ಮೈಸೂರು | B.A.B.Ed., B.Sc.B.Ed.<br>M.Ed |
| 3. | ದಿ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್, ಓಂಕಾರಮಲ್ ಸೋಮನಿ ಕಾಲೇಜ್ , ಮೈಸೂರು. | B.Ed. |
| 4. | ಶಾರದ ವಿಲಾಸ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |

| | | |
|---|---|---|
| 5. | ಸೇಂಟ್ ಜೋಸಫ್ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 6. | ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 7. | ವಿದ್ಯಾವಿಕಾಸ್ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 8. | ಶ್ರೀ ಛಾಯಾದೇವಿ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 9. | ಬಿ.ಜಿ.ಎಸ್. ಬಿ.ಎಡ್. ಕಾಲೇಜು, ಕುವೆಂಪುನಗರ, ಮೈಸೂರು | B.Ed. |
| 10. | ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ, ಮೈಸೂರು | B.Ed. |
| 11. | ಶ್ರೀ ಮಹಾವೀರ ಕಾಲೇಜ್ ಆಫ್ ಎಜುಕೇಷನ್, ಹುಣಸೂರು. | B.Ed. |
| 12. | ಜೆ.ಎಸ್.ಎಸ್. ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್, ಸುತ್ತೂರು | B.Ed. |
| 13. | ಮಹಾತ್ಮ ಗಾಂಧಿ ಕಾಲೇಜ್ ಆಫ್ ಎಜುಕೇಷನ್, ಮೈಸೂರು | B.Ed. |
| 14. | ಮೌಲನಾ ಅಜ್ಹಾದ್ ಶಿಕ್ಷಣ ಕಾಲೇಜು, ಮೈಸೂರು | B.Ed. |
| 15. | ಯಡತೊರೆ ಶಿಕ್ಷಣ ಕಾಲೇಜು, ಕೆ.ಆರ್. ನಗರ | B.Ed. |

**III. 2025–26ನೇ ಶೈಕ್ಷಣಿಕ ಸಾಲಿನ ಹೊಸ ಪ್ರಥಮ ದರ್ಜೆ ಕಾಲೇಜುಗಳ ಪ್ರಸ್ತಾವನೆಯ ವಿವರ: 03**

| | | |
|---|---|---|
| 1. | ಕೃಷಿಕ್ ಸರ್ವೋದಯ ಫೌಂಡೇಶನ್ ಸ್ಕೂಲ್ ಆಫ್ ಬಿಸಿನೆಸ್, ಮೈಸೂರು | B.C.A, B.Com, |
| 2. | ಶಾರದಾ ವಿಲಾಸ್ ಕಾಲೇಜು ಆಫ್ ಕಾಮರ್ಸ್ ಅಂಡ್ ಬಿಸಿನೆಸ್ ಸ್ಟಡೀಸ್, ಮೈಸೂರು | B.Com, BBA |
| 3. | ಜ್ಞಾನಧಾರ ಸಂಜೆ ಕಾಲೇಜು, ಹುಣಸೂರು | BA, B.Com |

- ಕೃಷಿಕ್ ಸರ್ವೋದಯ ಫೌಂಡೇಶನ್ ಸ್ಕೂಲ್ ಆಫ್ ಬಿಸಿನೆಸ್, ಮೈಸೂರು ಇವರಿಗೆ ಸ್ಥಳೀಯ ವಿಚಾರಣಾ ಸಮಿತಿಯು ಸಂಯೋಜನೆ ನೀಡಲು ಶಿಫಾರಸ್ಸು ಮಾಡಿರುತ್ತದೆ.
- ಶಾರದಾ ವಿಲಾಸ್ ಕಾಲೇಜು ಆಫ್ ಕಾಮರ್ಸ್ ಅಂಡ್ ಬಿಸಿನೆಸ್ ಸ್ಟಡೀಸ್, ಮೈಸೂರು ಇವರಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೆ ಸಂಯೋಜನೆಯನ್ನು ನೀಡಲು ಶಿಫಾರಸ್ಸು ಮಾಡಲಾಗುತ್ತದೆ.
- ಜ್ಞಾನಧಾರ ಸಂಜೆ ಕಾಲೇಜು, ಹುಣಸೂರು ಇವರಿಗೆ ಸ್ಥಳೀಯ ವಿಚಾರಣಾ ಸಮಿತಿಯು ಹೊಸದಾಗಿ ಕಾಲೇಜುನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿರುವುದಿಲ್ಲ.

**IV. 2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯನ್ನು ರದ್ದುಪಡಿಸಲು ಕೋರಿರುವ ಪ್ರಥಮ ದರ್ಜೆ ಕಾಲೇಜುಗಳು:**

| ಕ್ರ.ಸಂ | ಕಾಲೇಜಿನ ಹೆಸರು |
|---|---|
| 1 | ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, ತಾಂಡವಪುರ, ನಂಜನಗೂಡ ತಾ. ಮೈಸೂರು ಜಿಲ್ಲೆ |
| 2 | ಶ್ರೀ ಛಾಯಾದೇವಿ ಪ್ರಥಮ ದರ್ಜೆ ಕಾಲೇಜು, ಮಂಜುನಾಥ ಬಡಾವಣೆ, ಹುಣಸೂರು, ಮೈಸೂರು ಜಿಲ್ಲೆ |

**(ಶ್ರೀ ಛಾಯಾದೇವಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಇವರು 2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯನ್ನು ಮುಂದುವರಿಸುವುದಕ್ಕಾಗಲಿ ಅಥವಾ ಕಾಲೇಜನ್ನು ಮುಚ್ಚುವುದಕ್ಕಾಗಲಿ UUCMS ನಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಹಾಗೂ ಸಂಯೋಜನಾ ಶುಲ್ಕವನ್ನು ಸಹ ಪಾವತಿಸಿರುವುದಿಲ್ಲ, ಸ್ಥಳೀಯ ವಿಚಾರಣಾ ಸಮಿತಿಯು ಸಹಾ ಕಾಲೇಜಿಗೆ ಭೇಟಿ ನೀಡಿರುವುದಿಲ್ಲ.)**

**V.2025-26ನೇ ಶೈಕ್ಷಣಿಕ ಸಾಲಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೇ ಸಂಯೋಜನೆ ಮುಂದುವರೆಸುವಂತೆ ಶಿಫಾರಸು ಮಾಡಿರುವ ಪ್ರಥಮ ದರ್ಜೆ ಕಾಲೇಜುಗಳು : ಯಾವುದೂ ಇಲ್ಲ**

**VI. 2025-26ನೇ ಶೈಕ್ಷಣಿಕ ಸಾಲಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೇ ಸಂಯೋಜನೆ ಮುಂದುವರೆಸುವಂತೆ ಷರತ್ತುಬದ್ಧ ಶಿಫಾರಸು ಮಾಡಿರುವ ಶಿಕ್ಷಣ ಕಾಲೇಜುಗಳು : ಯಾವುದೂ ಇಲ್ಲ**

**VII. 2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಹೊಸ ಸಂಯೋಜನೆಗೆ ಶಿಫಾರಸು ಮಾಡಿರುವ ಕಾಲೇಜುಗಳು: 01**

| ಕ್ರ.ಸಂ | ಕಾಲೇಜಿನ ಹೆಸರು | ಕೋರ್ಸುಗಳ ವಿವರ |
|---|---|---|
| 1 | ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು | MCA- 80 |

**VIII. 2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪದವಿ ಕಾಲೇಜುಗಳ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ/ಹೊಸ ಕೋರ್ಸು/ ವಿಷಯ ಸಮೂಹ/ಹೊಸ ಭಾಷೆ/ಕಾಲೇಜಿನ ಹೆಸರು ಬದಲಾವಣೆ/ಶಾಶ್ವತ ಸಂಯೋಜನೆಗೆ ಶಿಫಾರಸು ಮಾಡಿರುವ ವಿವರ:**

1. **ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ:**

| ಕ್ರ.. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು | ಕಾಂಬಿನೇಷನ್ | ಹಾಲಿ ಇರುವ ಪ್ರವೇಶಾತಿ ಸಂಖ್ಯೆ | ಸಮಿತಿ ಹೆಚ್ಚುವರಿ ಮಂಜೂರು ಮಾಡಿರುವ ಪ್ರವೇಶಾತಿ ಸಂಖ್ಯೆ |
|---|---|---|---|---|---|
| 1 | ಸೇಫಿಯಂಟ್ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್, ಮೈಸೂರು, ಮೈಸೂರು | BCA | - | 120 | **60** |
| 2 | ಕ್ರೈಸ್ಟ್ ಕಾಲೇಜು, ಶ್ರೀರಾಂಪುರ, ಮೈಸೂರು | BCA | - | 120 | **60** |
| | | B.Com | - | 120 | **60** |
| | | B.Sc | Mathematics, Statistics, Computer Science | 30 | **30** |
| 3 | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು | B.Com | - | 360 | **60** |
| | | BCA | - | 360 | **60** |
| | | BBA | - | 60 | **60** |
| | | B.Sc | PCM | 120 | **60** |
| | | | PMCs | 80 | **60** |
| | | | CBZ | 120 | **60** |
| 4 | ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು | BCA | - | 80 | **40** |
| 5 | ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜು, ಮೈಸೂರು | BCA | - | 60 | **60** |
| 6 | ದೇವಲಾ ಮಹರ್ಷಿ ಟ್ರಿನಿಟಿ ಪ್ರಥಮ ದರ್ಜೆ ಕಾಲೇಜು, ಮೈಸೂರು | BCA | - | 60 | **60** |

| | | | | | |
|---|---|---|---|---|---|
| 7 | ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು | BCA | - | 120 | **60** |
| | | BBA | - | 60 | **60** |
| 8 | ಶಾರದಾ ವಿಲಾಸ ಕಾಲೇಜು, ಮೈಸೂರು | BCA | - | 60 | **60** |
| 9 | ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, | BCA | - | 120 | **60** |
| 10 | ಭಾರತ ಮಾತಾ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಪಿರಿಯಾಪಟ್ಟಣ ತಾ., ಮೈಸೂರು ಜಿಲ್ಲೆ | BCA | - | 60 | **60** |
| 11 | ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, ಮಾನಂದವಾಡಿ, ಮೈಸೂರು | BCA | - | 60 | **120** |

**2. ಹೊಸ ಕೋರ್ಸು/ಕಾಂಬಿನೇಷನ್/ಭಾಷೆ:**

| ಕ್ರ.. ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸುಗಳು | ಕಾಂಬಿನೇಷನ್ | ಪ್ರವೇಶಾತಿ ಸಂಖ್ಯೆ |
|---|---|---|---|---|
| 1 | ಕ್ರೈಸ್ಟ್ ಕಾಲೇಜು, ಶ್ರೀರಾಂಪುರ, ಮೈಸೂರು | B.Sc | **Human Development, Psychology, Criminology and Forensic Sciences** | **60** |
| 2 | ಟೆರೇಷಿಯನ್ ಕಾಲೇಜು, ಮೈಸೂರು | B.Sc | **Psychology, Human Development, Clinical Nutrition and Deities** | **60** |
| 3 | ಮೈಸೂರು ಸಿಟಿ ಮೈನಾರಿಟಿ ಪ್ರಥಮ ದರ್ಜೆ ಕಾಲೇಜು, ಮೈಸೂರು | BA | **HEP-30**<br>**HEG-30** | **60** |

**3. 2025-26ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜಿನ ಹೆಸರು ಬದಲಾವಣೆ ಮಾಡಿರುವ ಕಾಲೇಜಿನ ವಿವರ:**

| ಕ್ರ..ಸಂ | ಕಾಲೇಜಿನ ಹೆಸರು | ಬದಲಾವಣೆ ಮಾಡಿರುವ ಕಾಲೇಜಿನ ಹೆಸರು |
|---|---|---|
| 1 | ಕಾವೇರಿ ಕಾಲೇಜ್ ಆಫ್ ಲೈಫ್‌ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರು | **ಕಾವೇರಿ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್, ಎಂದು ಸ್ಥಳೀಯ ವಿಚಾರಣಾ ಸಮಿತಿಯು ಶಿಫಾರಸು ಮಾಡಿರುತ್ತದೆ.** |

**4. ಶಾಶ್ವತ ಸಂಯೋಜನೆಗೆ ಶಿಫಾರಸು ಮಾಡಿರುವ ಪ್ರಥಮ ದರ್ಜೆ ಕಾಲೇಜುಗಳು – ಯಾವುದು ಇಲ್ಲ.**

**IX. 2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜಿತ ಪದವಿ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳಿಗೆ ಹೆಚ್ಚುವರಿ ಪ್ರವೇಶಾತಿ ಸಂಖ್ಯೆಗೆ ಶಿಫಾರಸು ಮಾಡಿರುವ ವಿವರ : ಯಾವುದೂ ಇಲ್ಲ.**

ಒಟ್ಟಾರೆ ಸಾರಾಂಶವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ್ದು ಈ ಮೇಲಿನ ಎಲ್ಲಾ ವಿಷಯಗಳಿಗೆ ಅನುಮೋದನೆಗಾಗಿ ಕೋರಲಾಗಿದೆ ಎಂದು ತಿಳಿಸಿದರು.

ಶ್ರೀ ನಾಗರಾಜು.ಸಿ.ರವರು ಮಾತನಾಡಿ, 2025-26ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ಥಳೀಯ ಪರಿಶೀಲನಾ ಸಮಿತಿ ಆಯಾ ಕಾಲೇಜುಗಳಿಗೆ ಭೇಟಿ ನೀಡಿ ಸಲ್ಲಿಸಿರುವ ವರದಿಯ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ತಿಳಿಸಿದರು. ಮುಂದುವರೆದು,

Serial Number, ಕಾಲೇಜಿನ ಹೆಸರು ಹಾಗೂ ಕೋರ್ಸುಗಳ ಹೆಸರುಗಳನ್ನು ಹಾಕಿದ್ದು ಇನ್ನಾವುದೇ ಮಾಹಿತಿಯಿರುವುದಿಲ್ಲವೆಂದು, ಸ್ಥಳೀಯ ಪರಿಶೀಲನಾ ಸಮಿತಿ ನೀಡಿರುವ ವರದಿಯ ಮಾಹಿತಿಯನ್ನು ದಾಖಲೆ ಸಮೇತ ಒದಗಿಸುವಂತೆ ಸಿಡಿಸಿ ನಿರ್ದೇಶಕರವರಿಗೆ ತಿಳಿಸಿದರು.

ಪ್ರೊ. ಡಿ.ಆನಂದ್‌ರವರು ಮಾತನಾಡಿ, ಸಂಪೂರ್ಣ ಸಂಯೋಜನಾ ಪ್ರಕ್ರಿಯೆಯು ಅನ್‌ಲೈನ್ ಮೂಲಕ ನಡೆಸಲಾಗುತ್ತದೆ. ಸಂಯೋಜನೆ ಕೋರುವ ಕಾಲೇಜಿನವರು ಅನ್‌ಲೈನ್ ಮೂಲಕವೇ ಅರ್ಜಿಗಳನ್ನು ಸಲ್ಲಿಸಲಿದ್ದು, ಸದರಿ ಅನ್‌ಲೈನ್ ಪ್ರಕ್ರಿಯೆಯಲ್ಲಿ ನಾಲ್ಕು ಲಾಗೀನ್‌ಗಳಿರುತ್ತವೆ. ಕಾಲೇಜು, ಸಿಡಿಸಿ, ಸ್ಥಳೀಯ ಪರಿಶೀಲನಾ ಸಮಿತಿ ಹಾಗೂ ವರದಿ ಸಲ್ಲಿಸಿರುವ ಲಾಗೀನ್‌ಗಳಿರುತ್ತವೆಂದು ತಿಳಿಸಿದರು. ಕಾಲೇಜುಗಳ ಸಂಯೋಜನಾ ಪ್ರಕ್ರಿಯೆಗಳನ್ನು ಭೌತಿಕವಾಗಿ ನಡೆಸಿ ವರದಿಯನ್ನು ಆನ್‌ಲೈನ್ ಮೂಲಕ upload ಮಾಡಲಾಗಿದೆಯೆಂದು ತಿಳಿಸಿದರು. ಪ್ರಸುತ ಸಾಲಿನಲ್ಲಿ ಸಮಿತಿಯವರು ನೀಡಿರುವ ವರದಿಯು ಆನ್‌ಲೈನ್ ಹಾಗೂ ಲಿಖಿತ ರೂಪದಲ್ಲಿ ಇರುತ್ತದೆ. ಲಿಖಿತ ವರದಿಯನ್ನು ಪರಿಶೀಲಿಸಬಹುದಾಗಿದೆಯೆಂದು ತಿಳಿಸಿದರು.

ಶ್ರೀ ಮಹಾದೇಶುರವರು ಮಾತನಾಡಿ, 82+ 15 ಕಾಲೇಜುಗಳಿಗೆ ಸಮಿತಿ ಭೌತಿಕವಾಗಿ ಭೇಟಿ ನೀಡಿದೆಯೇ ಎಂದು ಕೇಳಿದರು.

ಪ್ರೊ. ಆನಂದ್.ಡಿ.ರವರು ಮಾತನಾಡಿ, ಸಮಿತಿಯು ಭೌತಿಕವಾಗಿ ಭೇಟಿ ನೀಡಿ ಕಾಲೇಜುಗಳನ್ನು ಪರಿಶೀಲಿಸಿರುವುದಾಗಿ ತಿಳಿಸಿದರು. 22 ಸಮಿತಿಗಳು ಇದ್ದು, ಪ್ರತಿ ಸಮಿತಿಯಲ್ಲಿ ಹಿರಿಯ ಪ್ರಾಧ್ಯಾಪಕರನ್ನು ಅಧ್ಯಕ್ಷರಾಗಿ ಹಾಗೂ ವಿಷಯ ತಜ್ಞರನ್ನು ಸದಸ್ಯರನ್ನಾಗಿ ನೇಮಿಸಲಾಗಿರುತ್ತದೆಯೆಂದು ತಿಳಿಸಿದರು.

ಶ್ರೀ ಮಹಾದೇಶುರವರು ಮಾತನಾಡಿ, 20-22 ಸಮಿತಿಗಳನ್ನು ರಚಿಸಲಾಗಿದೆಯೆಂದು ತಿಳಿಸಿರುತ್ತೀರಿ, ಸದರಿ ಸಮಿತಿಗಳಿಗೆ ಯಾವ ಕಾಲೇಜಿನವರು ಮಾಹಿತಿ ನೀಡಿರುತ್ತಾರೆ ಹಾಗೆಯೇ ಯಾವ ಕಾಲೇಜಿನವರು ಮಾಹಿತಿ ನೀಡಿರುವುದಿಲ್ಲವೋ ಅವರಿಗೆ ಎಚ್ಚರಿಕೆ ನೋಟೀಸ್ ನೀಡಿರುವಿರಾ ಎಂಬುದರ ಬಗೆಗಿನ ಮಾಹಿತಿಯನ್ನು ನೀಡಿ ಎಂದು ಕೇಳಿದರು.

ಪ್ರೊ. ಆನಂದ್.ಡಿ.ರವರು ಮಾತನಾಡಿ, ಯಾವ ಯಾವ ಕಾಲೇಜಿಗೆ ಸಮಿತಿ ಭೇಟಿ ನೀಡಿರುತ್ತಾರೆ ಎಂಬ ಪೂರ್ಣ ಮಾಹಿತಿ ವರದಿಯಲ್ಲಿರುತ್ತದೆ ಅದನ್ನು ಪರಿಶೀಲಿಸಬಹುದಾಗಿದೆಯೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕಳೆದ ವರ್ಷ ನೀವು ವಿಧಿಸಿರುವ ಷರತ್ತುಗಳನ್ನು ಕಾಲೇಜಿನವರು ಪೂರ್ಣಗೊಳಿಸಿದ್ದಾರೆಯೇ ಪೂರ್ಣಗೊಳಿಸಿಲ್ಲದ ಕಾಲೇಜಿಗೆ ನೋಟಿಸ್ ನೀಡಿದ್ದೀರ ಮತ್ತು ಯಾವ ಕ್ರಮ ಕೈಗೊಂಡಿದ್ದೀರಾ ಎಂದು ಕೇಳಿದರು.

ಪ್ರೊ. ಆನಂದ್ .ಡಿ. ರವರು ಮಾತನಾಡಿ, ಸಮಿತಿಯವರು ಕಾಲೇಜಿಗೆ ಭೇಟಿ ನೀಡುವ ಸಂದರ್ಭದಲ್ಲಿ ಹಿಂದಿನ ವರ್ಷ ವಿಧಿಸಿರುವ ಷರತ್ತುಗಳನ್ನು ಪೂರ್ಣಗೊಳಿಸಿದ್ದಾರೆಯೇ ಎಂಬುದನ್ನು ಪರಿಶೀಲಿಸಲಾಗುತ್ತದೆ. ಶೇಕಡ 60ರಷ್ಟು ಕಾಲೇಜಿನವರು ಭಾಗಶಃ ಪೂರ್ಣಗೊಳಿಸಿರುತ್ತಾರೆ, ಅಂತಹ ಕಾಲೇಜುಗಳಿಗೂ ಸಹ ಎಚ್ಚರಿಕೆ ನೀಡಲಾಗುವುದು ಎಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್.ರವರು ಮಾತನಾಡಿ, ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿಲ್ಲವೆಂದು ತಿಳಿಸಿದರು. ಉದ್ದೇಶ ಪೂರ್ವಕವಾಗಿ ಕೆಲವೊಂದು ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಲ್ಲವೆಂದು ತಿಳಿಸಿದರು. ವಿಶ್ವವಿದ್ಯಾನಿಲಯ ಈ ಕಾಲೇಜುಗಳ ವಿರುದ್ಧ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದರು.

ಪ್ರೊ. ಆನಂದ್.ಡಿ. ರವರು ಮಾತನಾಡಿ, ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಅನುದಾನಿತ ಕಾಲೇಜಿನಲ್ಲಿ ಸರ್ಕಾರ ಮಂಜೂರು ಮಾಡಿರುವ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎಂಬ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಲಾಗಿ ಸರ್ಕಾರದಿಂದ ಅನುಮತಿ ಬಂದಿಲ್ಲದಿರುವುದರಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲವೆಂದು ಕಾಲೇಜಿನವರು ಉತ್ತರಿಸುತ್ತಾರೆ. ಮುಂದಿನ ವರ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಹಾಗೂ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಅಭ್ಯರ್ಥಿಗಳು ಬಂದಿರುವುದಿಲ್ಲವೆಂದು ತಿಳಿಸುತ್ತಾ, ಸಂಯೋಜನೆಯನ್ನು ನೀಡುವ ಸಂದರ್ಭದಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು ಮಂಜೂರಾಗಿದೆ, ಸರ್ಕಾರದಿಂದ ಖಾಲಿ ಇರುವ ಹುದ್ದೆಗಳಿಗೆ ಮೀಸಲಾತಿ ನೀಡುವುದು ಹಾಗೂ ನಿಯಮಗಳನ್ನು ಪಾಲಿಸುವುದರ ಬಗ್ಗೆ ಷರತ್ತುಗಳನ್ನು ವಿಧಿಸುತ್ತೇವೆಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್.ರವರು ಮಾತನಾಡಿ, ಜೆಎಸ್ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಮಂಜುರಾದ ಹುದ್ದೆ ಎದುರಾಗಿ ಮೀಸಲಾತಿ ಅನ್ವಯ ಭರ್ತಿ ಮಾಡಬೇಕಾದ ಹುದ್ದೆಗಳಲ್ಲಿ ಸುಮಾರು 60ರಷ್ಟು ಹುದ್ದೆಗಳು ಖಾಲಿ ಇರುವುದಾಗಿ ತಿಳಿಸಿದರು. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ ಎಂದು ಸರ್ಕಾರ ಈಗಾಗಲೇ ನಿರ್ದೇಶನ ನೀಡಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಸದರಿ ಕಾಲೇಜಿನವರು ಸರ್ಕಾರದ ಆದೇಶವನ್ನು ಉಲ್ಲಂಘಿಸಿದ್ದು, ವಿಶ್ವವಿದ್ಯಾನಿಲಯ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದರು.

ಪ್ರೊ. ಆನಂದ್.ಡಿ.ರವರು ಮಾತನಾಡಿ, ಜೆಎಸ್ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು ಸ್ವಾಯತ್ತ ಕಾಲೇಜಾಗಿರುವುದರಿಂದ ಡಾ. ನಟರಾಜ್ ಹೆಚ್ಎಸ್ ರವರು ತಿಳಿಸಿರುವಂತೆ ಸದರಿ ಕಾಲೇಜಿನ ನೇಮಕಾತಿಯ ಕುರಿತು ವಿಶ್ವವಿದ್ಯಾನಿಲಯದ ವತಿಯಿಂದ ಯಾವುದೇ ಕ್ರಮಕೈಗೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕಾಲೇಜುಗಳ ಮೂಲಭೂತ ಸೌಕರ್ಯ, ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳ ಕುರಿತು ಪರಾಮರ್ಶಿಸಬಹುದಾಗಿರುವ ಕರ್ತವ್ಯವನ್ನು ವಿಶ್ವವಿದ್ಯಾನಿಲಯದ ಸ್ಥಳೀಯ ವಿಚಾರಣಾ ಸಮಿತಿಯ ವತಿಯಿಂದ ನಿರ್ವಹಿಸ ಬಹುದಾಗಿರುತ್ತದೆ. ನೇಮಕಾತಿ ಕುರಿತಂತೆ ಸರ್ಕಾರವೇ ನೇರವಾಗಿ ಈ ಸಂಬಂಧ ಪರಾಮರ್ಶಿಸಬಹುದಾಗಿರುತ್ತದೆ. ಏಕೆಂದರೆ ಕೆಲವು ಕಾಲೇಜುಗಳಲ್ಲಿ ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿದ ಸಂದರ್ಭದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವಂತೆ ಸೂಚಿಸಿದ್ದರೂ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ, ಸರ್ಕಾರದ ನಿರ್ದೇಶನದಂತೆ ಮೀಸಲಾತಿಗನುಗುಣವಾಗಿ ಸೂಕ್ತ ಅಭ್ಯರ್ಥಿಗಳ ಲಭ್ಯತೆ ಇಲ್ಲದೆ ಇರುವುದು ಈ ರೀತಿ ನಾನಾ ನ್ಯೂನತೆಗಳನ್ನು ತಿಳಿಸುತ್ತಾರೆ. ಮುಂದುವರೆದು, ಇಂದಿನ ಕಾಲಘಟ್ಟದಲ್ಲಿ ಉದ್ಯೋಗವನ್ನು ಸೃಷ್ಟಿಸಬಲ್ಲಂತಹ ಕೋರ್ಸ್‌ಗಳಿಗೆ ಬೇಡಿಕೆ ಇರುವುದರಿಂದ ಅದರಲ್ಲಿ ಬಿಬಿಎ, ಬಿಸಿಎ, ಎಂಬಿಎ, ಎಂಸಿಎ ಈ ರೀತಿಯ ಕೋರ್ಸುಗಳಿಗೆ ವಿದ್ಯಾರ್ಥಿಗಳಿಂದ ಬೇಡಿಕೆ ಹೆಚ್ಚಿದ್ದು, ಸದರಿ ಕೋರ್ಸುಗಳಿಗೆ ಪ್ರವೇಶಾತಿ ಮಿತಿಯನ್ನು ಹೆಚ್ಚಿಸುವಂತೆ ಕಾಲೇಜಿನವರು ಪ್ರಸ್ತಾವನೆ ಸಲ್ಲಿಸುತ್ತಾರೆ ಉಳಿದಂತೆ ಬೇಡಿಕೆ ಇಲ್ಲದ ಕೋರ್ಸುಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಾ ಬಂದಿದೆ ಎಂದು ತಿಳಿಸಿದರು.

ಡಾ. ಬಸವರಾಜು .ಸಿ. ರವರು ಮಾತನಾಡಿ, ಈ ಹಿಂದೆ ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಕಾಲೇಜುಗಳಲ್ಲಿನ ನ್ಯೂನತೆಗಳನ್ನು ಮುಂಬರುವ ಶೈಕ್ಷಣಿಕ ವರ್ಷದಿಂದ ಸರಿಪಡಿಸಿಕೊಳ್ಳುವಂತೆ ಸಲಹೆ/ಸೂಚನೆಗಳನ್ನು ನೀಡಿದ್ದರೂ ಸಹ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ವಿಫಲವಾದಂತಹ ಕಾಲೇಜುಗಳ ವಿರುದ್ಧ ಏನು ಕ್ರಮವಹಿಸಬಹುದು ಈ ಹಿನ್ನೆಲೆಯಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿಯಿಂದ ಯಾವ ಸುಧಾರಣಾ ಕ್ರಮಗಳನ್ನು ಜಾರಿಗೆ ತರಬಹುದು ಅಥವಾ ಯಾವ ರೀತಿಯ ಯೋಜನೆಯನ್ನು ರೂಪಿಸಬಹುದೆಂದು ಸಭೆಗೆ ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸರ್ಕಾರವೇ ಬದಲಾವಣೆ ಪ್ರಕ್ರಿಯೆ ಕೈಗೊಳ್ಳಬೇಕು. ಖಾಯಂ ಅಧ್ಯಾಪಕರ ಕೊರತೆ ಎಲ್ಲ ಕಾಲೇಜುಗಳಲ್ಲಿಯೂ ಇದೆ. Teaching

| | |
|---|---|
| | learning process ನ್ಯೂನತೆಗಳು ಹಿಂದಿನಿಂದಲೂ ಇದೆ, ಕಾಲೇಜುಗಳು ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪತ್ರ ಬರೆದಿರುತ್ತೇವೆಂದು ತಿಳಿಸುತ್ತಾರೆ. ವಿಧಿಸುವ ಷರತ್ತುಗಳನ್ನು ಭಾಗಶ: ಪೂರೈಸುತ್ತಾರೆ. ಈ ವರ್ಷಕ್ಕೆ ಮಾತ್ರ ಸೀಮಿತವಾಗಿ ಸಂಯೋಜನೆಯನ್ನು ನೀಡಲಾಗುತ್ತದೆಯೆಂದು ತಿಳಿಸಿದರು.<br><br>ಡಾ. ಶಿಲ್ಪ ಜೆ. ಇವರು ಮಾತನಾಡಿ, ಕಾಲಂ Vರಲ್ಲಿ 2025-26ನೇ ಶೈಕ್ಷಣಿಕ ಸಾಲಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೇ ಸಂಯೋಜನೆ ಮುಂದುವರೆಸುವಂತೆ ಶಿಫಾರಸು ಮಾಡಿರುವ ಪ್ರಥಮ ದರ್ಜೆ ಕಾಲೇಜುಗಳು :ಯಾವುದೂ ಇಲ್ಲ ಹಾಗೂ VI. 2025-26ನೇ ಶೈಕ್ಷಣಿಕ ಸಾಲಿಗೆ ಷರತ್ತುಗಳನ್ನು ಪೂರೈಸಿದ ನಂತರವಷ್ಟೇ ಸಂಯೋಜನೆ ಮುಂದುವರೆಸುವಂತೆ ಷರತ್ತುಬದ್ಧ ಶಿಫಾರಸು ಮಾಡಿರುವ ಶಿಕ್ಷಣ ಕಾಲೇಜುಗಳು : ಯಾವುದೂ ಇಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುತ್ತೀರಿ ಈ ಹಿನ್ನೆಲೆಯಲ್ಲಿ 2024-25ನೇ ಸಾಲಿನಲ್ಲಿ ವಿಧಿಸಿದಂತಹ ಷರತ್ತುಗಳನ್ನು/ಶಿಫಾರಸ್ಸುಗಳನ್ನು ಪೂರೈಸಲಾಗಿದೆಯೇ ಎಂದು ಕೇಳಿದರು.<br><br>ಪ್ರೊ. ಆನಂದ್.ಡಿ.ರವರು ಮಾತನಾಡಿ, ನೇರವಾಗಿ ಷರತ್ತುಗಳನ್ನು ಪೂರೈಸದೇ ಇದ್ದಲ್ಲಿ, ಉದಾಹರಣೆಗೆ ಅಧ್ಯಾಪಕರ ಕೊರತೆ, ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಇಂತಿಷ್ಟೇ ಪುಸ್ತಕಗಳು ಇರಬೇಕೆಂಬ ನಿಯಮಗಳನ್ನು ಪ್ರಾಯಶ: ರಾಜ್ಯದ ಅಥವಾ ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಡುವ ಯಾವುದೇ ಕಾಲೇಜಿನವರು ಸಹ ಪೂರೈಸಲು ಸಾಧ್ಯವಾಗುವುದಿಲ್ಲ ಈ ಹಿನ್ನೆಲೆಯಲ್ಲಿ ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಷರತ್ತುಗಳನ್ನು ವಿಧಿಸಿ ಸಂಯೋಜನೆಯನ್ನು ಮುಂದುವರೆಸಲಾಗಿದೆ ಎಂದು ವರದಿಯನ್ನು ನೀಡುತ್ತಾರೆ. ಈ ಹಿಂದೆ ವಿಧಿಸಿದಂತಹ ಷರತ್ತಿನಲ್ಲಿ ಭಾಗಶ: ಷರತ್ತನ್ನು ಪೂರೈಸಿರುವುದರಿಂದ ಪ್ರಸ್ತುತ 2025-26ನೇ ಶೈಕ್ಷಣಿಕ ಸಾಲಿಗೆ ಯಾವುದು ಇರುವುದಿಲ್ಲ ಎಂದು ಸ್ಥಳೀಯ ವಿಚಾರಣಾ ಸಮಿತಿ ವರದಿ ನೀಡಿದೆ ಎಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ಸಂಯೋಜನೆಯನ್ನು ಮುಂದುವರೆಸುವ ಸಂಬಂಧ ಷರತ್ತುಗಳನ್ನು ಪೂರೈಸುವಂತೆ ಕಡ್ಡಾಯ ಮಾಡಿದಲ್ಲಿ ನಿರ್ದಿಷ್ಟವಾಗಿ ಯಾವುದೇ ಕಾಲೇಜುಗಳು ಸಹ ಮಾರ್ಗಸೂಚಿಯನ್ವಯ ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ ಒಂದು ವೇಳೆ ಮಾರ್ಗಸೂಚಿಯಂತೆ ಪೂರ್ಣಪ್ರಮಾಣದ ಷರತ್ತುಗಳನ್ನು ಪೂರ್ಣಗೊಳಿಸುವಂತೆ ತಿಳಿಸಿದಲ್ಲಿ ಶೇಕಡ 50ರಷ್ಟು ಕಾಲೇಜುಗಳು ಮುಚ್ಚಲ್ಪಡುತ್ತವೆ ಎಂದು ತಿಳಿಸಿದರು.<br><br>ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಸುಮಾರು ಕಾಲೇಜುಗಳಲ್ಲಿ ಬಿಸಿಎ ಪದವಿಗೆ ಪ್ರವೇಶಾತಿ ಮಿತಿಯನ್ನು ಹೆಚ್ಚಿಸುವಂತೆ ಪ್ರಸ್ತಾವನೆಗಳು ಬಂದಿರುತ್ತದೆ. ಈ ಸಂಬಂಧ ವಿಶ್ವವಿದ್ಯಾನಿಲಯವು 60 ಸೀಟುಗಳಿಗೆ ಮಿತಿಗೊಳಿಸಿದ್ದು, AICTE ರವರು 40 ಸೀಟುಗಳಿಗೆ ಮಿತಿಗೊಳಿಸಿದೆ ಎಂದು ತಿಳಿಸಿದರು. ಈ ರೀತಿಯ ಸಮಸ್ಯೆಗೆ AICTEಯಲ್ಲಿಯು ಸಹ 60 ಸೀಟುಗಳಿಗೆ ಅನುಮೋದನೆ ನೀಡುವಂತೆ ವಿಶ್ವವಿದ್ಯಾನಿಲಯದ ವತಿಯಿಂದ ಮನವಿ ಮಾಡಬಹುದೇ ಹಾಗೂ ಈ ರೀತಿಯ ಅಸಮತೋಲನವನ್ನು ಸರಿಪಡಿಸುವುದರ ಕುರಿತು ಯಾವುದಾದರೂ ಕ್ರಮವಹಿಸಬಹುದೆ ಎಂದು ಕೇಳಿದರು.<br><br>ಪ್ರೊ. ಆನಂದ್.ಡಿ.ರವರು ಮಾತನಾಡಿ, ಒಂದು ಯುನಿಟ್ ಅಂದರೆ 60 ವಿದ್ಯಾರ್ಥಿಗಳು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು 60 ವಿದ್ಯಾರ್ಥಿಗಳಿಗೆ ಮಿತಿಗೊಳಿಸಿದೆ ಅದೇ ರೀತಿ AICTEಯಲ್ಲಿ ಒಂದು ಯುನಿಟ್ ಅಂದರೆ 40 ವಿದ್ಯಾರ್ಥಿಗಳು ಎಂದು ತಿಳಿಸಿದರು. ಮುಂದುವರೆದು AICTEಯಲ್ಲಿಯೂ ಸಹ ಕಾಲೇಜಿನವರು ಎಷ್ಟು ಪ್ರವೇಶಾತಿ ಸಂಖ್ಯೆ ಬೇಕೆಂದು ಮನವಿ ಸಲ್ಲಿಸಿದಲ್ಲಿ ಅಷ್ಟೇ ಪ್ರವೇಶಾತಿ ಸಂಖ್ಯೆಯನ್ನೇ ಮಂಜೂರು ಮಾಡುತ್ತಿರುವುದಾಗಿಯೂ ಸಹ ತಿಳಿಸಿದರು.<br><br>ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿಯ ವತಿಯಿಂದ 20 ತಂಡಗಳ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಿದ್ದು, |

| | |
|---|---|
| | ಒಂದು ದಿನದಲ್ಲಿ ಕನಿಷ್ಟ ನಾಲ್ಕು ಕಾಲೇಜುಗಳಿಗೆ ಭೇಟಿ ನೀಡಲಿದ್ದು, ಸದರಿ ತಂಡವು ಎರಡು ಕಾಲೇಜುಗಳಿಗೆ ಸಮರ್ಪಕವಾಗಿ ಭೇಟಿ ನೀಡಿ ಆ ದಿನ ಕೊನೆಯದಾಗಿ ಉಳಿಯುವ ಕಾಲೇಜುಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಪೂರ್ಣವಾಗಿ ಪರಾಮರ್ಶಿಸದೆ ಕೇವಲ ಪಿಪಿಟಿ ಪ್ರಸೆಂಟೇಷನ್ ಅನ್ನು ನೋಡಿ ನಿರ್ಣಯವನ್ನು ತೆಗೆದುಕೊಳ್ಳುವಂತಾಗುತ್ತದೆಯಲ್ಲವೇ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಯುಜಿಸಿ ನ್ಯಾಕ್ ಸಮಿತಿಯ ಸದಸ್ಯನಾಗಿ ಹಲವು ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಿದ್ದು ಹಲವು ವಿಶ್ವವಿದ್ಯಾನಿಲಯಗಳಲ್ಲಿ ಕೇವಲ ಶೈಕ್ಷಣಿಕ ಹಾಗೂ ಸಂಶೋಧನಾ ಕಾರ್ಯಕ್ರಮಗಳ ಕುರಿತು ಕಾರ್ಯೋನ್ಮುಖವಾಗಿರುವುದರ ಬಗ್ಗೆ ಚರ್ಚಿಸಿ ಬಂದಿರುವುದಾಗಿ ಉಳಿದಂತೆ ಸದರಿ ವಿಶ್ವವಿದ್ಯಾನಿಲಯದ ಮೂಲಭೂತ ಸೌಕರ್ಯಗಳು ಹಾಗೂ ಇತರೆ ಎಲ್ಲಾ ವಿಷಯಗಳ ಬಗ್ಗೆ ಅನ್‌ಲೈನ್ ಮೂಲಕವೇ ವಿಶ್ವವಿದ್ಯಾನಿಲಯಗಳು ಮಾಹಿತಿಯನ್ನು ದಾಖಲು ಮಾಡಿರುತ್ತವೆ ಅದೇ ರೀತಿಯಾಗಿ ಯುಯುಸಿಎಂಎಸ್ ತಂತ್ರಾಂಶದ ಮೂಲಕ ವಿಶ್ವವಿದ್ಯಾನಿಲಯದಿಂದ ಸಂಯೋಜನೆ, ಗೊಳಪಟ್ಟಿರುವ ಕಾಲೇಜುಗಳು ಸಹ ಅನ್‌ಲೈನ್ ಮೂಲಕವೇ ಹಲವು ದಾಖಲೆಗಳನ್ನು/ ಮಾಹಿತಿಗಳನ್ನು ಒದಗಿಸಿರುವುದರಿಂದ ಈ ಪ್ರಕ್ರಿಯೆಯಲ್ಲಿ ಯಾವುದೇ ಲೋಪವನ್ನು ಎಸಗಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಸರ್ಕಾರದ ಕಾಲೇಜುಗಳಲ್ಲಿ ವಿದ್ಯಾರ್ಥಿ ಗಳಿಗನುಗುಣವಾಗಿ ಮೂಲಭೂತ ಸೌಕರ್ಯಗಳೇ ಇರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಆದರೂ ಸಹ ಸದರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಯೋಜನೆಯನ್ನು ಮುಂದುವರೆಸುವ ಅನಿವಾರ್ಯತೆ ಇರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಸ್ಥಳೀಯ ವಿಚಾರಣಾ ಸಮಿತಿಯಲ್ಲಿರುವ ಸದಸ್ಯರುಗಳಿಗೆ ಕಾಲೇಜುಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಯಾವ ವಿಷಯದ ಕುರಿತು ಅವಲೋಕಿಸಬೇಕು ಎಂಬುದರ ಕುರಿತು ಸಂಪೂರ್ಣ ಅರಿವಿರುವುದಿಲ್ಲವೆಂದು ಆದ್ದರಿಂದ ಪ್ರತಿಯೊಂದು ವಿಷಯದ ಕುರಿತು ಅವಲೋಕಿಸಬೇಕಾಗಿರುತ್ತದೆ ಎಂದು ತಿಳಿಸಿದರು.<br><br>ಪ್ರೊ. ಆನಂದ್.ಡಿ.ರವರು ಮಾತನಾಡಿ, ಕಾಲೇಜುಗಳಿಗೆ ಭೇಟಿ ನೀಡುವ ತಂಡಗಳಿಗೆ ಇಂತಿಷ್ಟು ವಿಷಯಗಳ ಕುರಿತು ಪರಾಮರ್ಶಿಸುವಂತೆ 15 ವಿಷಯಾಧಾರಿತ ಪರಿಶೀಲನಾ ಪಟ್ಟಿಯನ್ನು ನೀಡಿರುತ್ತೇವೆಂದು ತಿಳಿಸಿದರು.<br><br>ಡಾ. ಬಸವರಾಜು ಸಿರವರು ಮಾತನಾಡಿ, ಪರಿಶೀಲನಾ ಪಟ್ಟಿಯಲ್ಲಿ ತಿಳಿಸಿರುವಂತೆ ಗ್ರಂಥಾಲಯವಿದೆಯೇ ಇಲ್ಲವೇ ಎಂದು ಪರಿಶೀಲಿಸಬೇಕೆಂದಿರುತ್ತದೆ. ಆದರೆ ಕೆಲವು ಕಾಲೇಜುಗಳಲ್ಲಿ ಗ್ರಂಥಾಲಯದಲ್ಲಿ ಪುಸ್ತಕಗಳು ಕಡಿಮೆ ಸಂಖ್ಯೆಯಲ್ಲಿರುತ್ತದೆ, ಆಗ ಅನುಮೋದನೆ ನೀಡಬೇಕೆ ಅಥವಾ ಬೇಡವೆ ಎಂಬ ಬಗ್ಗೆ ಗೊಂದಲವಾಗುತ್ತದೆಯೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಯಾವುದು ಆ 15 ವಿಷಯಾಧಾರಿತ ಪರಿಶೀಲನಾ ಪಟ್ಟಿ ಎಂಬುದಾಗಿ ಮಾಹಿತಿ ಕೋರಿದರು.<br><br>ಪ್ರೊ. ಆನಂದ್ .ಡಿ. ರವರು ಮಾತನಾಡಿ, ಸಂಯೋಜನೆಗೆ ಒಳಪಡುತ್ತಿರುವ ಕಾಲೇಜು ಯಾವುದಾದರೂ ಒಂದು ಟ್ರಸ್ಟ್‌ನ ವತಿಯಿಂದ ನಿರ್ವಹಿಸಲ್ಪಡುತ್ತಿರುವ ಕಾಲೇಜೇ, ಟ್ರಸ್ಟ್ ಡೀಡ್ ನೊಂದಾಯಿತವಾಗಿರುವುದೇ ಎಂದು ಪರಿಶೀಲಿಸಲಾಗುವುದು, ಕಾಲೇಜಿನ ಕಟ್ಟಡವು ಸ್ವಂತದೇ, ಬಾಡಿಗೆಯೇ ಅಥವಾ ಭೋಗ್ಯಕ್ಕೆ ಒಳಪಟ್ಟಿರುವುದೇ. ಭೋಗ್ಯಕ್ಕೆ ಒಳಪಟ್ಟಿದಲ್ಲಿ ಕನಿಷ್ಟ ಮೂವತ್ತು ವರ್ಷಗಳಿಗೆ ಕರಾರು ಒಪ್ಪಂದವಾಗಿರಬೇಕು, ಕಾಲೇಜು ಪ್ರಾರಂಭ ಮಾಡುವ ಮೊದಲು ತೀರ್ಮಾನ ಏನಾಗಿದೆ ಎಂಬುದನ್ನು ಪರಿಶೀಲಿಸಲಾಗುತ್ತದೆ, ಕರ್ನಾಟಕ ಸರ್ಕಾರದ ನಿಯಮದನ್ವಯ ಪ್ರಥಮ ದರ್ಜೆ ಕಾಲೇಜಿನ ವಿಸ್ತೀರ್ಣ ಸರಿ ಸುಮಾರು ಮೂರು ಎಕರೆ |

| | |
|---|---|
| | ವಿಸ್ತೀರ್ಣ ಹೊಂದಿರಬೇಕು, ಒಬ್ಬ ವಿದ್ಯಾರ್ಥಿಗೆ ಕನಿಷ್ಟ 4 x 4 ಅಳತೆಯ ಕುಳಿತುಕೊಳ್ಳಲು ಜಾಗವನ್ನು ನೀಡಬೇಕೆಂಬ ನಿಯಮವಿರುತ್ತದೆ. ಕೆಲವೊಂದು ತರಗತಿಗಳಲ್ಲಿ 40 ವಿದ್ಯಾರ್ಥಿಗಳ ಬದಲಾಗಿ 60 ವಿದ್ಯಾರ್ಥಿಗಳಿರುತ್ತಾರೆ, 100 ವಿದ್ಯಾರ್ಥಿಗಳ ಬದಲಾಗಿ 120 ವಿದ್ಯಾರ್ಥಿಗಳಿರುತ್ತಾರೆ, ಕಾಲೇಜಿನಲ್ಲಿ ಸುಸಜ್ಜಿತ ಭೋಧನಾ ಕೊಠಡಿಗಳು, ಕ್ರೀಡಾಂಗಣ, ನುರಿತ ದೈಹಿಕ ಶಿಕ್ಷಕರಿರಬೇಕು, ಪ್ರಯೋಗಾಲಯಗಳು, ಗ್ರಂಥಾಲಯ ಹಾಗೂ ಸದರಿ ಗ್ರಂಥಾಲಯದಲ್ಲಿ ಕೋರ್ಸುವಾರು ವಿದ್ಯಾರ್ಥಿಗಳಿಗನುಗುಣವಾಗಿ ಪುಸ್ತಕಗಳ ಲಭ್ಯತೆ, ರಾಜ್ಯ ಹಾಗೂ ರಾಷ್ಟ್ರಮಟ್ಟದ Journalsಗಳಿರಬೇಕು, ಗ್ರಂಥಾಲಯದಲ್ಲಿ ಅರ್ಹತೆಯುಳ್ಳ ಗ್ರಂಥಪಾಲಕರಿರಬೇಕು, ಪೂರ್ಣಕಾಲಿಕ ಪ್ರಾಂಶುಪಾಲರು ನೇಮಕಾತಿಯನ್ನು ಹೊಂದಿರಬೇಕು, ಅವರ ಕ್ವಾಲಿಫಿಕೇಷನ್‌ಅನ್ನು ಪರಿಶೀಲಿಸಬೇಕು, ಪ್ರತಿ ವಿಷಯದಲ್ಲೂ NET-SLET ತೇರ್ಗಡೆ ಹೊಂದಿರುವ ಬೋಧಕರಿರಬೇಕು, ಕೆಲವೊಂದು ಕಾಲೇಜುಗಳಲ್ಲಿ NET-SLET ತೇರ್ಗಡೆ ಹೊಂದಿಲ್ಲದಿರುವ ಬೋಧಕರನ್ನು ನೇಮಕಾತಿ ಮಾಡಿಕೊಂಡಿರುತ್ತಾರೆ, ಸಮಿತಿಯು ಪ್ರಶ್ನಿಸಿದಾಗ ಸದರಿ ಬೋಧಕರು NET-SLET ಪರೀಕ್ಷೆಯನ್ನು ಬರೆದಿದ್ದು ಫಲಿತಾಂಶಕ್ಕಾಗಿ ಕಾಯುತ್ತಿರುತ್ತಾರೆ ಎಂದು ಉತ್ತರಿಸುತ್ತಾರೆ, ನಾವು ಷರತ್ತಿನಲ್ಲಿ ಅರ್ಹತೆಯಿಲ್ಲದವರನ್ನು ನೇಮಕಾತಿ ಮಾಡಿಕೊಂಡಿರುವುದರಿಂದ, ಅತಿ ಶೀಘ್ರವಾಗಿ ಅವರು NET-SLET ತೇರ್ಗಡೆ ಹೊಂದಿ ಫಲಿತಾಂಶದ ವಿವರವನ್ನು ನೀಡಬೇಕೆಂದು ಹಾಗೂ NET-SLET ತೇರ್ಗಡೆ ಹೊಂದಿದಂತಹ ಅಧ್ಯಾಪಕರುಗಳನ್ನೇ ನೇಮಿಸಬೇಕೆಂದು ಸೂಚಿಸಿರುತ್ತೇವೆ. ಕಾಲೇಜಿನವರು ಎಷ್ಟು ಶುಲ್ಕಗಳನ್ನು ವಿಧಿಸುತ್ತಾರೆ, ಹಣಕಾಸು ಪತ್ರಗಳನ್ನು ಹಾಗೂ ಒಂದು ವೇಳೆ ವರಮಾನ ತೆರಿಗೆ ಕಟ್ಟುತ್ತಿದ್ದರೆ ಅದನ್ನು ಪರಿಶೀಲಿಸಲಾಗುವುದೆಂದು ತಿಳಿಸಿದರು. ಬೋಧಕ/ಬೋಧಕೇತರರಿಗೆ ವೇತನವನ್ನು ನೀಡುವುದರ ವಿವರ, ಅಧ್ಯಾಪಕರಿಂದ ಹಾಗೂ ವಿದ್ಯಾರ್ಥಿಗಳಿಂದ ಸ್ಥಳೀಯ ವಿಚಾರಣಾ ಸಮಿತಿ ಗೌಪ್ಯವಾಗಿ ವಿವರಗಳನ್ನು ಕೇಳಬೇಕೆಂಬ ನಿಯಮವಿದೆ, ಏನಾದರೂ ದೂರು ಬಂದಲ್ಲಿ ಆಡಳಿತ ಮಂಡಳಿಯ ಗಮನಕ್ಕೆ ತಂದು ಅದನ್ನು ನಿವಾರಣೆ ಮಾಡುವ ಪ್ರಯತ್ನ ಮಾಡಬೇಕೆಂಬುದು ಪರಿಶೀಲನಾ ಪಟ್ಟಿಯಲ್ಲಿದೆ, ಪೀಠೋಪಕರಣಗಳು ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕೆಂಬ ಅಂಶ, ಪರಿಶೀಲನಾ ಪಟ್ಟಿಯಲ್ಲಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಮಹದೇಶುರವರು ಮಾತನಾಡಿ, ವರ್ಷಕ್ಕೊಂದು ಬಾರಿ ಮಾತ್ರ ಸ್ಥಳೀಯ ವಿಚಾರಣಾ ಸಮಿತಿಯವರು ಕಾಲೇಜುಗಳಿಗೆ ಭೇಟಿ ನೀಡುತ್ತಾರೆ, ಮಧ್ಯದಲ್ಲಿ ಒಂದು ಬಾರಿ ಭೇಟಿ ನೀಡಿ ಸಮಿತಿಯ ಶಿಫಾರಸ್ಸುಗಳನ್ನು ಪೂರೈಸಿರುವುದರ ಬಗ್ಗೆ ಖಾತರಿ ಪಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸಮಿತಿಯು ಮತ್ತೊಮ್ಮೆ ಕಾಲೇಜುಗಳಿಗೆ ಭೇಟಿ ನೀಡಿದರೆ ಆರ್ಥಿಕ ಹೊರೆಯಾಗುತ್ತದೆಯೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಶೇಕಡ ೯೦ರಷ್ಟು ಕಾಲೇಜುಗಳು ಹಳೆಯ ಕಟ್ಟಡಗಳಾಗಿರುತ್ತವೆ ಎಂದು ತಿಳಿಸಿದರು.<br><br>ಡಾ. ಬಿ.ಆರ್. ಜಯಕುಮಾರಿಯವರು ಮಾತನಾಡಿ, ಮೂಲಭೂತ ಸೌಕರ್ಯಗಳಾಗಲಿ, ಪೀಠೋಪಕರಣಗಳ ವ್ಯವಸ್ಥೆ ಸರಿಯಿಲ್ಲದಿದ್ದರೂ ಕೂಡ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನಿರಾಕರಿಸಬಾರದೆಂದು ಸರ್ಕಾರದ ಆದೇಶವಿದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು.ಸಿ.ರವರು ಪುಟ ಸಂಖ್ಯೆ 1 ರಲ್ಲಿ ಹಾಲಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು ಎಂಬ ವಿಷಯದ ಬಗ್ಗೆ ಮಾತನಾಡುತ್ತಾ, ಈಗಾಗಲೇ ಮಾನಸಗಂಗೋತ್ರಿಯ ಕೆಲವೊಂದು ವಿಭಾಗಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತಿದೆ, ಸರ್ಕಾರಿ, ಅರೆಸರ್ಕಾರಿ, ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆಯನ್ನು ಮುಂದುವರೆಸಿದಲ್ಲಿ, ಮಾನಸಗಂಗೋತ್ರಿಯ ಅಧ್ಯಯನ ವಿಭಾಗಗಳಿಗೆ |

| | |
|---|---|
| | ವಿದ್ಯಾರ್ಥಿಗಳ ಕೊರತೆಯಾಗುವುದಿಲ್ಲವೇ ಎಂದು ಕೇಳಿದರು. ಮುಂದುವರೆದು, ಮಾನಸಗಂಗೋತ್ರಿಯೆಂದರೆ ಡಾ.ಕುವೆಂಪುರವರು, ಡಾ. ಕುವೆಂಪುರವರು ಪ್ರಾಧ್ಯಾಪಕರಾಗಿ ಹಾಗೂ ಆಡಳಿತ ನಡೆಸಿದ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳು ಮುಚ್ಚಿಹೋಗಬಹುದೆಂಬ ಆತಂಕವಿದೆ, ಆದ್ದರಿಂದ ಮಾನ್ಯ ಕುಲಪತಿಯವರು, ಸಿಂಡಿಕೇಟ್ ಸದಸ್ಯರು ಹಾಗೂ ಸಿಡಿಸಿ ನಿರ್ದೇಶಕರು ಚಿಂತನೆ ನಡೆಸಬೇಕೆಂಬುದು ತಮ್ಮ ಮನವಿಯೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ನನ್ನ ಅಧಿಕಾರದ ಅವಧಿಯಲ್ಲಿ ಯಾವುದೇ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಅನುಮತಿಯನ್ನು ನೀಡಿಲ್ಲವೆಂದು, ಎಂಬಿಎ ಹಾಗೂ ಎಂಸಿಎ ಕೋರ್ಸುಗಳಿಗೆ ಹೆಚ್ಚಿನ ಬೇಡಿಕೆಯಿದೆ ಎಂದು ತಿಳಿಸಿದರು. ಕೆಲವು ಕೋರ್ಸುಗಳು ವಿದ್ಯಾರ್ಥಿಗಳಿಲ್ಲದೆ ಸ್ಥಗಿತಗೊಂಡಿದೆ. ಸರ್ಕಾರದ ಅನುಮತಿ ಪಡೆದಿರುವ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯವು ಪ್ರವೇಶಾತಿ ಇಳಿಮುಖವಾಗಿರುವ ವಿಭಾಗಗಳನ್ನು ಸ್ಥಗಿತಗೊಳಿಸಿ ಎಂದು ತಿಳಿಸಲು ಸಾಧ್ಯವಿಲ್ಲ. ಬಿಸಿಎ ಹಾಗೂ ಎಂಸಿಎ ಕೋರ್ಸುಗಳಿಗೆ ಅರ್ಹತೆಯುಳ್ಳ ಶಿಕ್ಷಕರಿಲ್ಲ. ತಮ್ಮ ಚಿಂತನೆಯೇನೆಂದರೆ ಆದಷ್ಟು ಗುಣಮಟ್ಟ ನೀಡುವ ಉನ್ನತ ಶಿಕ್ಷಕರಿರಬೇಕೆಂದು, ಎಂಸಿಎ ಮತ್ತು ಎಂಬಿಎ ಕೋರ್ಸುಗಳಿಗೆ AICTEಯಿಂದ ಅನುಮತಿ ಪಡೆದುಕೊಂಡಿರುತ್ತಾರೆ ಆದ್ದರಿಂದ ವಿಶ್ವವಿದ್ಯಾನಿಲಯವು ಸಂಯೋಜನೆ ನೀಡಬೇಕಾಗಿರುತ್ತದೆಯೆಂದು ತಿಳಿಸಿದರು.<br><br>ಶ್ರೀ ನಾಗರಾಜು.ಸಿ.ರವರು ಮಾತನಾಡಿ, ಖಾಸಗಿ, ಸರ್ಕಾರಿ ಮತ್ತು ಅರೆಸರ್ಕಾರಿ ಕಾಲೇಜುಗಳಲ್ಲಿ ಯಾವ ಕಾಲೇಜುಗಳು ಯುಜಿಸಿ ಹಾಗೂ AICTE ನಿಯಮಗಳನ್ನು ಪಾಲಿಸುತ್ತಿಲ್ಲ ಅಂತಹ ಕಾಲೇಜುಗಳಿಗೆ ಸಂಯೋಜನೆಯನ್ನು ಮುಂದುವರೆಸಬಾರದೆಂದು ತಿಳಿಸಿದರು.<br><br>ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳ ಕರ್ತವ್ಯಕ್ಕೆ ತೊಂದರೆಯಾಗುತ್ತದೆಯೆಂದು ತಿಳಿಸಿದರು.<br><br>ಶ್ರೀ ನಾಗರಾಜು.ಸಿ.ರವರು ಮಾತನಾಡಿ, ಸುತ್ತೋಲೆ ಇದೆಯಲ್ಲವೇ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಕಾಲೇಜುಗಳಿಗೆ ವಿಧಿಸಿರುವ ಷರತ್ತುಗಳಲ್ಲಿ ಭಾಗಶ: ಷರತ್ತುಗಳನ್ನು ಪೂರೈಸಿದ ಕಾಲೇಜುಗಳಿಗೆ ಸಂಯೋಜನೆಯನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು.<br><br>ಡಾ. ನಟರಾಜ್ ಹೆಚ್.ಎಸ್. ರವರು ಮಾತನಾಡಿ, ಹೆಚ್ಚಿನ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಕೋರ್ಸ್‌ನ್ನು ವ್ಯಾಸಂಗ ಮಾಡಲು ತೆರಳುತ್ತಿದ್ದಾರೆಂದು ತಿಳಿಸಿದರು. ಮುಂದುವರೆದು, ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ವಿಚಾರಣಾ ಸಮಿತಿಗೆ ಸದಸ್ಯರನ್ನಾಗಿ ಸೇರ್ಪಡೆಗೊಳಿಸುವಂತೆ ಹಾಗೂ ಈಗಾಗಲೇ ಬೇರೆ ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ವಿಚಾರಣಾ ಸಮಿತಿಗೆ ಸದಸ್ಯರನ್ನಾಗಿ ನಿಯೋಜಿಸಿರುತ್ತಾರೆಂದು ತಿಳಿಸಿದರು. ಶ್ರೀ ಗೋಕುಲ್ ಗೋವರ್ಧನ್, ಡಾ. ಶಿಲ್ಪ.ಜೆ ಹಾಗೂ ಡಾ. ಟಿ.ಆರ್. ಚಂದ್ರಶೇಖರ್‌ರವರು ದನಿಗೂಡಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಈ ವಿಷಯದ ಕುರಿತು ಸರ್ಕಾರದಿಂದ ಸ್ಪಷ್ಟೀಕರಣ ಬಂದಿದ್ದು, ಸಿಂಡಿಕೇಟ್ ಸದಸ್ಯರು ಸಿಂಡಿಕೇಟ್ ಸಭೆಯಲ್ಲಿ ಅನುಮೋದಕರಾಗಿರುವುದರಿಂದ ಸ್ಥಳೀಯ ವಿಚಾರಣಾ ಸಮಿತಿಗೆ ಸದಸ್ಯರನ್ನಾಗಿ ನಿಯೋಜಿಸಬಾರದೆಂದು ತಿಳಿಸಿರುತ್ತದೆಯೆಂದು ಸಭೆಯ ಗಮನಕ್ಕೆ ತಂದರು,<br><br>ಡಾ. ಎಂ. ಪುಷ್ಪವತಿರವರು ಮಾತನಾಡಿ, ಹಿತಾಸಕ್ತಿ ಸಂಘರ್ಷ (conflict of interest) ಆಗುತ್ತದೆಯೆಂದು ತಿಳಿಸಿದರು. |

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, Specialized course ಹಾಗೂ ರಿಸರ್ಚ್ ಸೆಂಟರ್‌ಗಳ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರಿರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಹಿಂದಿನ ಅವಧಿಯಲ್ಲಿದ್ದ ಸಿಂಡಿಕೇಟ್ ಸದಸ್ಯರುಗಳು ತಾವು ಅನುಮೋದಕರಾಗಿದ್ದು ತಮಗೆ ಕಾಲೇಜುಗಳಿಗೆ ಭೇಟಿ ನೀಡಲು ಅನುವು ಮಾಡಿಕೊಡಬೇಕೆಂದು ತಿಳಿಸಿದ್ದರಿಂದ ಹಿಂದಿನ ಕುಲಪತಿಯವರು Specialized course ಹಾಗೂ ರಿಸರ್ಚ್ ಸೆಂಟರ್‌ಗಳ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸೇರ್ಪಡೆಗೊಳಿಸಿದ್ದರು ಎಂದು ತಿಳಿಸಿದರು. Specialized courseಗಳಿಗೆ ವಿಶ್ವವಿದ್ಯಾನಿಲಯವೇ ಅನುಮೋದನೆ ನೀಡಬೇಕಾಗಿರುತ್ತದೆಯೆಂದು ತಿಳಿಸಿದರು.

ಪ್ರೊ. ಆನಂದ್ .ಡಿ. ರವರು ಮಾತನಾಡಿ, ವಿಶ್ವವಿದ್ಯಾನಿಲಯವಾಗಲಿ, ಮಾನ್ಯ ಕುಲಪತಿಗಳಾಗಲಿ ಅಥವಾ ಕಾಲೇಜು ಅಭಿವೃದ್ಧಿ ಮಂಡಳಿಯಾಗಲಿ ಸಿಂಡಿಕೇಟ್ ಸದಸ್ಯರನ್ನು ಸಮಿತಿಗೆ ನಿಯೋಜಿಸುವುದರ ವಿರುದ್ಧವಿಲ್ಲ ಆದರೆ conflict of interest ಆಗುತ್ತದೆ ಎಂಬ ನಿಯಮವಿರುತ್ತದೆಯೆಂದು ತಿಳಿಸಿದರು. ವಿಚಾರಣಾ ಸಮಿತಿಯಲ್ಲಿ ವಿಷಯ ತಜ್ಞರನ್ನೊಳಗೊಂಡ ಸದಸ್ಯರಿರಬೇಕೆಂದು ಸಿಡಿಸಿ ನಿಯಮಾವಳಿಯಲ್ಲಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. Specialized courseಗಳಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಅನುಕೂಲವಿದೆಯೆಂದು ತಿಳಿಸಿದರು.

ಡಾ. ಮಹೇಶ್ ಟಿ.ಬಿ.ರವರು ಮಾತನಾಡಿ, ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿದ ಷರತ್ತುಗಳನ್ನು ಪೂರೈಸದೆ ಇದ್ದ ಕಾಲೇಜುಗಳಿಗೆ ಪುನ: ಭೇಟಿ ಮಾಡಬಹುದೆಂದಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕುಲಪತಿಗಳು ಅಥವಾ ಕುಲಸಚಿವರು ಕಾಲೇಜುಗಳಿಗೆ ಪುನ: ಭೇಟಿ ಮಾಡಬಹುದು ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಸ್ಥಳೀಯ ವಿಚಾರಣಾ ಸಮಿತಿ ಭೇಟಿ ನೀಡಿರುವ ಯಾವುದಾದರೂ ಒಂದು ಕಾಲೇಜಿನ ವಿಡಿಯೋವನ್ನು ಸಭೆಗೆ ತೋರಿಸುವಂತೆ ತಿಳಿಸಿದರು.

ಪ್ರೊ. ಆನಂದ್ .ಡಿ.ರವರು ಮಾತನಾಡಿ, ವಿಡಿಯೋ ಚಿತ್ರೀಕರಣಕ್ಕೆ ಅನುಮತಿಯಿರುವುದಿಲ್ಲವೆಂದು, AICTEರವರಿಗೆ ಮಾತ್ರ ಅನುಮತಿಯಿದೆ ಎಂದು ತಿಳಿಸಿದರು. UUCMSನ ಎಲ್ಲಾ ಮಾಹಿತಿಗಳನ್ನು ಅಪ್‌ಲೋಡ್ ಮಾಡಲಾಗುತ್ತದೆ, ವಿಚಾರಣಾ ಸಮಿತಿಯ ವರದಿಯ ಪ್ರತಿಯನ್ನು ಸಿಂಡಿಕೇಟ್ ಸದಸ್ಯರಿಗೆ ನೀಡುತ್ತೇವೆಂದು ತಿಳಿಸಿದರು.

ಡಾ. ಆಂಥೋನಿ ಪೌಲ್ ರಾಜ್ ಸಿ.ರವರು ಮಾತನಾಡಿ ಪ್ರೊ. ಲಿಂಗರಾಜ ಗಾಂಧಿಯವರು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಒಂದು ಕಾಲೇಜಿಗೆ ವಿದ್ಯಾರ್ಥಿಗಳ ಸಂಖ್ಯಾ ಮಿತಿಯ ಒಂದು ಯೂನಿಟ್‌ನ್ನು ಸಹ ಕೊಡಬಾರದೆಂದು ಸಂಯೋಜನೆಯನ್ನು ರದ್ದು ಮಾಡಿ ಎಂದು ವಿಶ್ವವಿದ್ಯಾನಿಲಯಕ್ಕೆ ವರದಿ ನೀಡಿದ್ದರು. ಅದನ್ನು ಪ್ರಶ್ನಿಸಿ ಸದರಿ ಕಾಲೇಜಿನ ಆಡಳಿತ ಮಂಡಳಿಯವರು AICTEಯ ಮೊರೆ ಹೋಗಿ ನಾಲ್ಕು ಯುನಿಟ್‌ಗಳಿಗೆ ಅನುಮೋದನೆಯನ್ನು ಪಡೆದರೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಷರತ್ತುಗಳನ್ನು ಪೂರೈಸದೆ ಇದ್ದರೂ ಸಹ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಕಾಲೇಜುಗಳಿಗೆ ಸಂಯೋಜನೆಯನ್ನು ರದ್ದುಪಡಿಸುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿದರು.

ಶ್ರೀ ನಾಗರಾಜು ಸಿ.ರವರು ಮಾತನಾಡಿ, ಅರೆ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ಯುಜಿಸಿ ನಿಯಮಾವಳಿಯ ಪ್ರಕಾರ ಅಧ್ಯಾಪಕರನ್ನು ನೇಮಕ ಮಾಡಿರುವ ಮಾಹಿತಿಯನ್ನು ಸಭೆಗೆ ನೀಡಿ ಎಂದು ಕೇಳಿದರು.

| | |
|---|---|
| | ಪ್ರೊ. ಆನಂದ್ .ಡಿ. ರವರು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿಯಲ್ಲಿ ನೇಮಕಾತಿಯ ಕುರಿತು ಮಾಹಿತಿ ಇರುವುದಿಲ್ಲ. ಎಷ್ಟು ಮಂಜೂರಾದ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡಿದ್ದೀರಾ ಎಂಬ ಬಗ್ಗೆ ಆಯಾ ಕಾಲೇಜಿನಲ್ಲಿ ದಾಖಲಾತಿಯಿರುತ್ತದೆ ಸಮಿತಿ ಭೇಟಿ ನೀಡುವ ಸಂದರ್ಭದಲ್ಲಿ ಅನುದಾನಿತ ಕಾಲೇಜಿನವರಿಗೆ ಕೇಳುತ್ತೇವೆ. ಅನುದಾನ ರಹಿತ ಕಾಲೇಜುಗಳೇ ಹೆಚ್ಚಾಗಿರುತ್ತದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, 9 ಅನುದಾನಿತ ಕಾಲೇಜುಗಳಿದ್ದು, ಮೂರು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ/ಶಿಕ್ಷಕರ ಸಂಖ್ಯೆ ಕಡಿಮೆ ಇರುತ್ತದೆ. ನಾಲ್ಕು ಕಾಲೇಜುಗಳಲ್ಲಿ ಪ್ರವೇಶಾತಿಯಾಗಿದೆ, ಮಂಜೂರಾದ ಹುದ್ದೆಗಳಿದ್ದರೂ ಸಹ ಖಾಯಂ ನೇಮಕಾತಿ ಆಗಿರುವುದಿಲ್ಲ. ಶಾರದ ವಿಲಾಸ್, ಸೋಮಾನಿ, ಟೆರೆಷಿಯನ್ ಮತ್ತು ವಿದ್ಯಾವರ್ಧಕ ಕಾಲೇಜುಗಳಲ್ಲಿ ಬೋಧಕರ ನೇಮಕಾತಿಯಾಗಿದೆ. ಬನುಮಯ್ಯ ಕಾಲೇಜಿನಲ್ಲಿಯೇ ಏಳು ವಿಭಾಗಗಳಿತ್ತು ಈಗ ಒಂದೇ ವಿಭಾಗವಿದೆ, 38 ಹುದ್ದೆಗಳು ಖಾಲಿ ಇದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಡಾ. ನಟರಾಜ್ ಹೆಚ್.ಎಸ್.ರವರು ಮಾತನಾಡಿ, ವಿದ್ಯಾರ್ಥಿಗಳ ಪ್ರವೇಶಾತಿ ಸಂದರ್ಭದಲ್ಲಿ ಮೀಸಲಾತಿ ನೀಡಲಾಗುತ್ತಿದೆಯೇ ಎಂದು ಕೇಳಿದರು.<br><br>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ ಮೀಸಲಾತಿ ನಿಯಮವನ್ನು ಪಾಲಿಸಲಾಗುತ್ತಿದೆಯೆಂದು ತಿಳಿಸಿದರು. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59ರ ಅನ್ವಯ 2025-26ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳಿಗೆ ಸ್ಥಳೀಯ ವಿಚಾರಣಾ ಸಮಿತಿಗಳು ಭೇಟಿ ನೀಡಿ, ಭೌತಿಕವಾಗಿ ಪರಿಶೀಲಿಸಿ ಆನ್‌ಲೈನ್ ಮೂಲಕ ಸಲ್ಲಿಸಿರುವ ಸಂಯೋಜನಾ ವರದಿಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. ಹಾಗೂ 2025-26ನೇ ಶೈಕ್ಷಣಿಕ ಸಾಲಿಗೆ ಎಂಐಟಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ ಮತ್ತು ಶ್ರೀ ಛಾಯಾದೇವಿ ಪ್ರಥಮ ದರ್ಜೆ ಕಾಲೇಜು, ಮಂಜುನಾಥ ಬಡಾವಣೆ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರು ಸಂಯೋಜನೆಯನ್ನು ರದ್ದುಪಡಿಸಲು ಕೋರಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 65ರಂತೆ ಕ್ರಮವಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/1.2** | ಸೂಕ್ಷ್ಮ ಜೀವಾಣುಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| **ಚರ್ಚೆ** | ಕುಲಸಚಿವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಎಂ.ವೈ. ಶ್ರೀನಿವಾಸ್, ಪ್ರಾಧ್ಯಾಪಕರು, ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 08-02-2023ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 07-02-2025ಕ್ಕೆ ಅಂತ್ಯಗೊಂಡಿರುತ್ತದೆ. ಮತ್ತು ಜೇಷ್ಠತೆಯಲ್ಲಿ ಪ್ರೊ. ಶುಭ ಗೋಪಾಲ್, ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಹಿರಿಯರಾಗಿರುತ್ತಾರೆ ಎಂದು ತಿಳಿಸಿದರು.<br><br>ಪ್ರೊ. ಶುಭ ಗೋಪಾಲ್‌ರವರ ವಿರುದ್ಧ ಸಂಶೋಧನಾ ವಿದ್ಯಾರ್ಥಿಯಾದ ಶ್ರೀಮತಿ ಹರ್ಷ ತೇಜಸ್ವಿನಿಯವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 13671/2024ರನ್ವಯ ದಾವೆ ಹೂಡಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಘನ ನ್ಯಾಯಾಲಯವು ನೀಡಿರುವ ತೀರ್ಪಿನ ಕುರಿತು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗಿದೆಯೆಂದು ಹಾಗೂ ಕಾನೂನು ಸಲಹೆಗಾರರು ಪ್ರೊ. ಶುಭ ಗೋಪಾಲ್ ಇವರ ವಿರುದ್ಧ ಘನ ನ್ಯಾಯಾಲಯವು ಯಾವುದೇ ನಿರ್ದೇಶನ ಅಥವಾ ಆದೇಶ ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ದಿನಾಂಕ: 14-06-2024ರಲ್ಲಿ ಘನ ನ್ಯಾಯಾಲಯವು |

| | |
|---|---|
| | ನೀಡಿರುವ ಆದೇಶವನ್ನು ಸ್ಪಷ್ಟವಾಗಿ ಪಾಲಿಸಬೇಕೆಂದು ಪ್ರೊ. ಶುಭ ಗೋಪಾಲ್ ಇವರಿಗೆ ಪ್ರತ್ಯೇಕ ನಿರ್ದೇಶನ ನೀಡುವಂತೆ ತಿಳಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.<br>ಡಾ. ಬಿ.ಆರ್. ಜಯಕುಮಾರಿ ಅವರು ಮಾತನಾಡಿ, ಘನ ನ್ಯಾಯಾಲಯವು ಪ್ರೊ. ಶುಭ ಗೋಪಾಲ್ ಇವರ ವಿರುದ್ಧ ತೀರ್ಪು ನೀಡಿದಲ್ಲಿ, ಯಾವ ರೀತಿ ಕ್ರಮವಹಿಸುವಿರಿ ಎಂದು ತಿಳಿಸಿದರು.<br>ಕುಲಸಚಿವರು ಮಾತನಾಡಿ, ಆ ಸಂದರ್ಭದಲ್ಲಿ ನ್ಯಾಯಾಲಯವು ನೀಡುವ ತೀರ್ಪಿನಂತೆ ಕ್ರಮವಹಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಶುಭ ಗೋಪಾಲ್, ಸೂಕ್ಷ್ಮ ಜೀವಾಣುಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/1.3** | Prin, L.N.Welingkar Institute of Management Development and Research, ನಂ.102 ಮತ್ತು 103, ಎಲೆಕ್ಟ್ರಾನಿಕ್ ಸಿಟಿ ಫೇಸ್-1, Next to BSNL Telephone Exchange, ಹೊಸೂರು ರಸ್ತೆ, ಬೆಂಗಳೂರು-560100 ಇವರು ಹೊಸದಾಗಿ Management ವಿಷಯದಲ್ಲಿ ಪಿಎಚ್.ಡಿ.ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of Cetain institutions for specified studies/specialized and Research Statutes 2008" ಅಧಿನಿಯಮದಂತೆ Prin, L.N.Welingkar Institute of Management Development and Research, ನಂ.102 ಮತ್ತು 103, ಎಲೆಕ್ಟ್ರಾನಿಕ್ ಸಿಟಿ ಫೇಸ್-1, Next to BSNL Telephone Exchange, ಹೊಸೂರು ರಸ್ತೆ, ಬೆಂಗಳೂರು-560100 ಸಂಸ್ಥೆಗೆ ಹೊಸದಾಗಿ Management ವಿಷಯದಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/1.4** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "Late Smt. Lakshmamma & Late Sri N.T. Huchathimme Gowda Memorial Cash Prize" ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 29(2) (r) ರ ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ದತ್ತಿಗಳ ಷರತ್ತಿನಂತೆ ಬಿಬಿಎ ಪದವಿಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ನಗದು ಬಹುಮಾನವನ್ನು ನೀಡುವ ಸಂಬಂಧ "Late Smt. Lakshmamma & Late Sri N.T. Huchathimme Gowda Memorial Cash Prize" ದತ್ತಿಯನ್ನು ಸ್ಥಾಪಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/1.5** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "Prof. Nagaraja Naik Cash Prize" ಮತ್ತು "ಶ್ರೀಮತಿ ಗೌರಮ್ಮ ಡಿ.ವಿ. ಕೃಷ್ಣಶೆಟ್ಟಿ ಚಿನ್ನದ ಪದಕ" ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 29(2) (r) ರ ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ದತ್ತಿಯ ಮೂಲಧನಕ್ಕೆ** |

| | |
|---|---|
| | ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ಈ ಕೆಳಕಂಡಂತೆ ತಿಳಿಸಿರುವ ಷರತ್ತಿನಂತೆ ದತ್ತಿಗಳನ್ನು ಸ್ಥಾಪಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.<br><br>1. M.Sc. Chemistry Examination in Inorganic Chemistry (all Semesters) ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ ನಗದು ಬಹುಮಾನವನ್ನು ನೀಡುವ ಸಂಬಂಧ **"Prof. Nagaraja Naik Cash Prize"** ದತ್ತಿಯನ್ನು ಸ್ಥಾಪನೆ ಮಾಡುವುದು.<br>2. ಮೈಸೂರು ವಿಶ್ವವಿದ್ಯಾನಿಲಯದ ಘಟಕ, ಸಂಯೋಜಿತ ಮತ್ತು ಸ್ವಾಯತ್ತತ ಕಾಲೇಜುಗಳಲ್ಲಿ ಪರಿಸರ ವಿಜ್ಞಾನ ಸ್ನಾತಕ ಪರೀಕ್ಷೆಯಲ್ಲಿ ಐಚ್ಛಿಕ (Optional) ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ **"ಶ್ರೀಮತಿ ಗೌರಮ್ಮ ಡಿ.ವಿ. ಕೃಷ್ಣಶೆಟ್ಟಿ ಚಿನ್ನದ ಪದಕ"** ದತ್ತಿಯನ್ನು ಸ್ಥಾಪನೆ ಮಾಡುವುದು. |
| **ಸಾಮಾನ್ಯ ಸಭೆ 2025/1.6** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಮೈಸೂರು ವಿಶ್ವವಿದ್ಯಾನಿಲಯದ ನೌಕರರ ಸಹಕಾರಿ ಪತ್ತಿನ ಸಂಘದ ಸಂಸ್ಥಾಪಕರಾದ ಪ್ರೊ. ಎನ್.ಎಸ್. ಸುಬ್ಬರಾವ್‌ರವರ ಸ್ಮರಣಾರ್ಥ ಚಿನ್ನದ ಪದಕ" ದತ್ತಿಯನ್ನು ಸ್ಥಾಪನೆ ಮಾಡಿರುವ ವಿಷಯವನ್ನು ಅನುಸಮರ್ಥಿಸುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 29(2) (r) ರ ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಬಡ್ಡಿಯ ಹಣವನ್ನು ದತ್ತಿಗಳ ಷರತ್ತಿನಂತೆ "ಎಂ.ಎ. in Co-Operative Management Course (ಸಹಕಾರ) ವಿಷಯ/ ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ "ಪ್ರೊ. ಎನ್.ಎಸ್. ಸುಬ್ಬರಾವ್‌ರವರ ಸ್ಮರಣಾರ್ಥ ಚಿನ್ನದ ಪದಕ" ದತ್ತಿಯನ್ನು ಸ್ಥಾಪಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2025/1.7** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "Students of First Batch MCA, Academic year 1992-1995 Gold Medal" ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 29(2) (r) ರ ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ದತ್ತಿಗಳ ಷರತ್ತಿನಂತೆ MCA Degree Examination in (Hard Core Courses) Computer Application ರಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡುವ ಸಂಬಂಧ ಅಂತಹ ವಿದ್ಯಾರ್ಥಿಗಳ ಪರವಾಗಿ ಡಾ. ಆರ್.ಕೆ. ಭಾರತಿ ಅವರು ಕೋರಿರುವಂತೆ "Students of First Batch MCA, Academic year 1992-1995 Gold Medal"ದತ್ತಿಯನ್ನು ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/1.8** | ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಉದ್ಯೋಗಿಗಳ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಿಕೊಂಡಿರುವ ಪರಿಷ್ಕೃತ ಕರಡು ಅಧಿನಿಯಮವನ್ನು ಸರ್ಕಾರವು ಸೂಚಿಸಿರುವಂತೆ ತಿದ್ದುಪಡಿ ಮಾಡುವ ಕುರಿತು. |
| **ತೀರ್ಮಾನ** | **ಸರ್ಕಾರದ ನಿರ್ದೇಶನದನ್ವಯ ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಉದ್ಯೋಗಿಗಳ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು** |

| | |
|---|---|
| | ರಚಿಸಿಕೊಂಡಿರುವ ಕರಡು ಅಧಿನಿಯಮದಲ್ಲಿ ತಿದ್ದುಪಡಿಗಳನ್ನು ಅಳವಡಿಸಿಕೊಂಡು, ಮುದ್ರಣ ದೋಷಗಳನ್ನು ಸರಿಪಡಿಸಿಕೊಂಡಿರುವ **"University of Mysore Statutes Governing Appointment on Compassionate Grounds-2023"** ಪರಿಷ್ಕೃತ ಕರಡು ಅಧಿನಿಯಮವನ್ನು ಅನುಮೋದಿಸಿ ಗೌರವಾನ್ವಿತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2025/1.9 | PROMOTIONS TO UNIVERSITY TEACHERS UNDER UGC-CAS |
| ತೀರ್ಮಾನ | **The recommendations of the Selection Committee in various subjects from the post of Professor to Senior Professor to the placement from Academic Level-14 to Academic Level-15 under UGC-CAS furnished below before the Syndicate is approved. Further, the Syndicate has also decided to extend the monetary benefits to the teachers from the date of the University order and subsequent reporting to the post to which they are promoted.** |

FROM PROFESSOR TO SENIOR PROFESSOR
(from Academic Level-14 to Academic Level-15)

| Sl. No. | Name of the Professor | Subject | Date of Interview | Date of reporting to duty as Professor (AGP Rs. 10000) | Date of Eligibility for reporting to the duty as Senior Professor | Remarks |
|---|---|---|---|---|---|---|
| 1. | Dr. Ramesh | Law | 03-02-2025 | 03-04-2013 | 03-04-2023 | Recommended |
| 2. | Dr. H.R.Uma | Economics | 03-02-2025 | 28-06-2011 | 28-06-2021 | Recommended |
| 3. | Dr. Vijay Sheshadri | English | 03-02-2025 | 12-08-2011 | 12-08-2021 | Recommended |
| 4. | Dr. P.Jayashree | Geography | 03-02-2025 | 22-12-2014 | 22-12-2024 | Recommended |
| 5. | Dr. K.N.Mohana | Chemistry | 03-02-2025 | 20-12-2014 | 20-12-2024 | Recommended |

| | |
|---|---|
| ಸಾಮಾನ್ಯ ಸಭೆ 2025/1.10 | PROMOTIONS BY SELCTION TO THE POST OF THE DEPUTY REGISTRAR |
| ತೀರ್ಮಾನ | **The Syndicate has approved the recommendations of the Board of Appointment, the meeting which was held on 31-01-2025, for promotion of Assistant Registrar to the post of Deputy Registrar** |
| ಸಾಮಾನ್ಯ ಸಭೆ 2025/1.11 | Appointment of Director, College Development Council, University of Mysore, Mysuru |
| ತೀರ್ಮಾನ | **The Syndicate has approved the recommendations of the Selection committee constituted vide Notification No.DV3/310/2010-11, dated 30-01-2025 the appointment of Dr.K.Mantelingu, Professor, Department of Studies in Chemistry, Manasagangotri, Mysuru as Director, College Development Council, University of Mysore, Mysuru on tenure basis for a period of four years.** |

**ಇತರೆ ವಿಷಯಗಳು:-**

ಡಾ. ಪುಷ್ಪಾವತಿ ಅವರು ಮಾತನಾಡಿ, ನ್ಯಾಕ್‌ಗೆ ಸಂಬಂಧಿಸಿದಂತೆ ವಿಷಯವನ್ನು ಪ್ರಸ್ತಾಪಿಸುತ್ತಾ, ವಿಶ್ವವಿದ್ಯಾನಿಲಯದ ನ್ಯಾಕ್‌ಗೆ ಆರಂಭದಿಂದಲೇ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡಬೇಕಾಗುತ್ತದೆ. ಜೊತೆಗೆ ನ್ಯಾಕ್‌ನವರು ಯಾವುದನ್ನೂ ತಪ್ಪಾಗಿರಬಹುದು ಎಂದು ತಿಳಿಸಿರುತ್ತಾರೋ ಅದನ್ನು ಸರಿಪಡಿಸಲಿಕ್ಕೆ ಕ್ರಮವಹಿಸಬೇಕಾಗುತ್ತದೆ. ಐದು ವರ್ಷದಲ್ಲಿ ಆ ಕೆಲಸ ಬಂದಾಗ ಅದರಲ್ಲಿ ತೊಡಗಿಕೊಳ್ಳುವ ಬದಲು, ಮೊದಲೇ ನ್ಯಾಕ್‌ಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡುವ ನಿಟ್ಟಿನಲ್ಲಿ ಒಂದು ವರ್ಷ ಅಥವಾ ಎರಡುವರ್ಷಕ್ಕೊಮ್ಮೆಯಾದರೂ ಸರಿಯಾದ ರೀತಿಯಲ್ಲಿ ನಿರ್ವಹಿಸಿದಾಗ ವಿಶ್ವವಿದ್ಯಾನಿಲಯದ ಘನತೆಯನ್ನು ಮತ್ತೊಮ್ಮೆ ಎತ್ತಿಹಿಡಿಯುವಲ್ಲಿ ಸಹಕಾರಿಯಾಗಬಹುದು. ಆದ್ದರಿಂದ IQACನ ನಿರ್ದೇಶಕರೊಂದಿಗೆ ಚರ್ಚಿಸಿ ನ್ಯಾಕ್‌ಗೆ ಬೇಕಾದ ಮಾಹಿತಿಯೆಲ್ಲವನ್ನು ಸರಿಯಾದ ರೀತಿಯಲ್ಲಿ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಸಿಂಡಿಕೇಟ್ ಸದಸ್ಯರುಗಳಾದ ನಮ್ಮಗಳಿಗೆ ವಿಶ್ವವಿದ್ಯಾನಿಲಯವು ಯಾವ ರೀತಿ ಕ್ರಮಕೈಗೊಳ್ಳುತ್ತಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನಾನು ನ್ಯಾಕ್‌ಗೆ ಕೆಲಸವನ್ನು ನಿರ್ವಹಿಸಿದ್ದೇನೆ. ಆ ನಿಟ್ಟಿನಲ್ಲಿ ಈಗಾಗಲೇ ಕಾರ್ಯಪ್ರವೃತ್ತನಾಗಿದ್ದೇನೆ. ಅದರಲ್ಲಿ ನಮಗೆ ಮೂಲಭೂತ ಸಮಸ್ಯೆಯೆಂದರೆ, ಖಾಯಂ ಬೋಧಕ ಸಿಬ್ಬಂದಿಯಿಲ್ಲದೆ ಇರುವುದು. ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರುಗಳು 3 ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿರುವವರು, 12 ಗಂಟೆಗಳ ಬೋಧನೆಯನ್ನು ಮಾಡುತ್ತಿರುವವರು, ಸಂಶೋಧನೆ ಮಾಡುತ್ತಿರುವವರು ಇಂತವರನ್ನು ಗಣನೆಗೆ ತೆಗೆದುಕೊಂಡು NIRF ರ್‍ಯಾಂಕಿಗೂ ಕೆಲಸ ಮಾಡಲಾಗಿದೆ. ವಾರದಲ್ಲಿ ಎರಡು-ಮೂರು ಬಾರಿ ಐಕ್ಯೂಎಸಿ ನಿರ್ದೇಶಕರ ಸಂಪರ್ಕದಲ್ಲಿದ್ದು, ಆಗು-ಹೋಗುಗಳ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ಹಾಗೂ AAA ಕಮಿಟಿಯನ್ನು ಮಾರ್ಚ್‌ನಲ್ಲಿ ಕರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಹಾಗೆಯೇ ಶೈಕ್ಷಣಿಕ ಕಾರ್ಯಕ್ರಮಗಳು ಬಹಳ ಕಡಿಮೆಯಾಗಿವೆ. ಆದ್ದರಿಂದ ರೂಸಾ ಅನುದಾನದಡಿಯಲ್ಲಿ ವಿಚಾರ ಸಂಕಿರಣ, ಕಾರ್ಯಗಾರಗಳನ್ನು ನಡೆಸಲು ಕಾರ್ಯೋನ್ಮುಖರಾಗಿದ್ದೇವೆ. ಮುಖ್ಯವಾಗಿ ನಮಗೆ ಬೇಕಾಗಿರುವುದು ಖಾಯಂ ಬೋಧಕ ಸಿಬ್ಬಂದಿ. ಜೊತೆಗೆ ನ್ಯಾಕ್‌ನವರು ಹೇಳಿರುವಂತೆ ಆರ್ಟ್ಸ್‌ನಲ್ಲಿ ಸಂಶೋಧನಾ ಕಾರ್ಯಗಳು ಬಹಳ ಕಡಿಮೆಯಾಗಿದೆ ಎಂದು ತಿಳಿಸಿರುತ್ತಾರೆ. ಕಲಾ ವಿಭಾಗದಲ್ಲಿ ಬರುವಂತಹ ಜರ್ನಲ್ ಯುಜಿಸಿ ಲೆವೆಲ್‌ನಲ್ಲಿ ಇರುವುದಿಲ್ಲ, ಸ್ಥಳೀಯವಾಗಿರುತ್ತದೆ ಜೊತೆಗೆ ವಿದ್ಯಾರ್ಥಿಗಳ ಸಂಖ್ಯೆಯು ಕೆಲವೊಂದು ವಿಭಾಗಗಳಲ್ಲಿ ಅಂದರೆ ಸಂಸ್ಕೃತ, ಜೈನಾಲಜಿ ಮತ್ತು ಪ್ರಾಕೃತ, ಹಿಂದಿ, ಆಂತ್ರೋಪಾಲಜಿ ಹಾಗೂ ಇತರೆ ವಿಷಯಗಳಲ್ಲಿ ಕಡಿಮೆಯಿರುವುದು ನ್ಯಾಕ್‌ನ ರ್‍ಯಾಂಕ್ ಕಡಿಮೆಯಾಗಲು ಕಾರಣವಾಗಿದೆ ಎಂದು ಹಲವು ಮಾಹಿತಿಗಳನ್ನು ಸಭೆಗೆ ತಿಳಿಸುತ್ತಾ, ಸಿಂಡಿಕೇಟ್‌ನ ಎಲ್ಲಾ ಸದಸ್ಯರು ಹಾಗೂ ಐಕ್ಯೂಎಸಿ ನಿರ್ದೇಶಕರೊಂದಿಗೆ ಒಂದು ಸಭೆಯನ್ನು ಆಯೋಜಿಸಲಾಗುವುದು. ನ್ಯಾಕ್‌ನ ರ್‍ಯಾಂಕ್ ಹೆಚ್ಚಿನ ಶ್ರೇಣಿಯಲ್ಲಿ ಪಡೆಯಲು ತಮ್ಮ ಸಹಕಾರ ಮತ್ತು ಸಲಹೆಗಳನ್ನು ನೀಡಬೇಕೆಂದು ತಿಳಿಸಿದರು.

ಮುಂದುವರೆದು, ವಿಶ್ವವಿದ್ಯಾನಿಲಯದ ಎಲ್ಲಾ ಪ್ರಾಧ್ಯಾಪಕ ವೃಂದದವರೊಂದಿಗೆ ಸಮಾಲೋಚನೆ ಮಾಡಿ, ಎಲ್ಲಾ ಪ್ರಾಧ್ಯಾಪಕರುಗಳಿಗೂ ಇಂತಿಂತಹ ಕೆಲಸಗಳು ಆಗಬೇಕು ಎಂದು ತಿಳಿಸಿದ್ದೇನೆ. ಆ ಸಂದರ್ಭದಲ್ಲಿ ಪ್ರಾಧ್ಯಾಪಕರುಗಳು ಬಡ್ತಿಯನ್ನು ನೀಡುವಂತೆ ಕೋರಿದ್ದರಿಂದ, ಬಡ್ತಿಯನ್ನೂ ನೀಡಲು ಕ್ರಮಕೈಗೊಳ್ಳಲಾಗಿದೆ. ಸರ್ಕಾರವು ನಮಗೆ ಬ್ಯಾಕ್‌ಲಾಗ್ ಹಾಗೂ ಖಾಯಂ ಪ್ರಾಧ್ಯಾಪಕರುಗಳನ್ನು ಭರ್ತಿ ಮಾಡಿ ನೀಡಿದರೆ 2026ಕ್ಕೆ ಮೈಸೂರು ವಿಶ್ವವಿದ್ಯಾನಿಲಯವು ಮುಂದೆ ಬರುವುದರಲ್ಲಿ ಯಾವುದೇ ಅನುಮಾನವಿಲ್ಲವೆಂದು, ನ್ಯಾಕ್‌ನಲ್ಲಿ ಉತ್ತಮ ರ್‍ಯಾಂಕ್ ಪಡೆಯಬೇಕೆಂಬುದು ನನ್ನ ಕನಸಾಗಿದೆ. ಹಾಗೆಯೇ ಎನ್‌ಐಆರ್‌ಎಫ್ ರ್‍ಯಾಂಕ್‌ನಲ್ಲಿ ಕೆಳಗಿರಬಾರದು ಎಂದು ತುಂಬಾ ಪ್ರಯತ್ನ ಪಡಲಾಗುತ್ತಿದೆ ಎಂದು ತಿಳಿಸಿದರು. ಆದ್ದರಿಂದ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಅಥವಾ ಐಕ್ಯೂಎಸಿ ನಿರ್ದೇಶಕರು ಹಾಗೂ ಸಿಂಡಿಕೇಟ್ ಸದಸ್ಯರೊಂದಿಗೆ ಸಭೆಯನ್ನು ನಡೆಸಲಾಗುವುದೆಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಹಿಂದೆ ಇದ್ದಂತಹ ಕುಲಪತಿಗಳು ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳಿಗೆ 2022-23ನೇ ಸಾಲಿನಲ್ಲಿ ನೀಡಿರುವ ಬಡ್ತಿಯು ಯುಜಿಸಿ ನಿಯಮಾವಳಿಗಳ ಪ್ರಕಾರ ನಡೆಸದೆ ಸಹಾಯಕ ಪ್ರಾಧ್ಯಾಪಕರಿಗೆ, ಸಹಪ್ರಾಧ್ಯಾಪಕರಿಗೆ ಬಡ್ತಿ ನೀಡಿರುತ್ತಾರೆ. ಉದಾಹರಣೆಗೆ ಯುವರಾಜ ಕಾಲೇಜಿನ ಡಾ. ಜಿ. ಶ್ರೀನಿವಾಸ, ಕನ್ನಡ ಪ್ರಾಧ್ಯಾಪಕರಿಗೆ ಬಡ್ತಿಯನ್ನು ನೀಡಿರುವುದು. ನಿಯಮಾವಳಿಗಳ ಪ್ರಕಾರ ಯಾರೇ ಪ್ರಾಧ್ಯಾಪಕರಿಗೆ ಬಡ್ತಿಯನ್ನು ನೀಡುವಾಗ ಆ ಪ್ರಾಧ್ಯಾಪಕರು ಒಬ್ಬ ಸಂಶೋಧನಾ

ವಿದ್ಯಾರ್ಥಿಗಾದರೂ ಮಾರ್ಗದರ್ಶನವನ್ನು ನೀಡಬೇಕಾಗುತ್ತದೆ. ಆದರೆ ಡಾ. ಜಿ. ಶ್ರೀನಿವಾಸರವರು ಒಬ್ಬ ವಿದ್ಯಾರ್ಥಿಗೂ ಸಂಶೋಧನೆಗೆ ಮಾರ್ಗದರ್ಶನವನ್ನೂ ನೀಡದೆ ಇದ್ದರೂ ಅವರಿಗೆ ಬಡ್ತಿಯನ್ನು ನೀಡಿರುವುದು ನಿಯಮಾವಳಿ ವಿರುದ್ಧವಾಗಿರುತ್ತದೆ. ನಿಯಮಾವಳಿಗಳ ಅಡಿಯಲ್ಲಿ ಬಡ್ತಿಯನ್ನು ನೀಡಿರುವುದಿಲ್ಲವೆಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜ್ ಅವರು ಮಾತನಾಡಿ, ಡಾ. ವೆಂಕಟೇಶ್ ಅವರು 2009ರಲ್ಲಿ ಖಾಯಂ ಬೋಧಕ ಸಿಬ್ಬಂದಿಯಾಗಿದ್ದು 15 ವರ್ಷಗಳು ಪೂರ್ಣಗೊಳ್ಳದೆ ಇದ್ದರೂ ಅವರಿಗೆ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿಯನ್ನು ನೀಡಲಾಗಿದೆ ಎಂದು ತಿಳಿಸಿದರು.

ಡಾ. ಬಸವರಾಜು ಸಿ. ಅವರು ಮಾತನಾಡಿ, ಇಂತಹ ಘಟನೆಗಳು ಅನೇಕವಿದೆ. ವಿಶ್ರಾಂತ ಕುಲಪತಿಗಳು ಯಾವ ಮಾನದಂಡವನ್ನು ಅನುಸರಿಸಿ, ಬಡ್ತಿಯನ್ನು ನೀಡಿರುತ್ತಾರೆ ಎಂಬುದು ಗಮನಕ್ಕೆ ಬರುತ್ತಿಲ್ಲವಾದ್ದರಿಂದ ಇದರ ಬಗ್ಗೆ ಸೂಕ್ತ ತನಿಖೆ ನಡೆಸಿ, ಒಂದು ಸಮಿತಿಯನ್ನು ರಚಿಸಿ, ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ಅನುಸರಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಿಂದೆಯೇ ನಾನು ಸದರಿ ವಿಷಯದ ಬಗ್ಗೆ ಕಡತವನ್ನು ಮಂಡಿಸಲು ಸೂಚಿಸಿದ್ದೆ, ಆದರೆ ಯಾವ ಕಾರಣಕ್ಕಾಗಿ ಸದರಿ ವಿಷಯದ ಬಗೆಗಿನ ಕಡತವು ಮುಂದುವರಿಯಲಿಲ್ಲ ಎಂಬುದು ಅರ್ಥವಾಗುತ್ತಿಲ್ಲ, ಆದ್ದರಿಂದ ಇದನ್ನು ಸಂಪೂರ್ಣವಾಗಿ ಪರಿಶೀಲಿಸಲು ನಾನು ಹಾಗೂ ಕುಲಸಚಿವರು ಚರ್ಚಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜು ಅವರು ಮಾತನಾಡಿ ಅರ್ಹರಿಗೆ ಬಡ್ತಿ ದೊರಕಬೇಕು. ಆ ನಿಟ್ಟಿನಲ್ಲಿ ಸಮಿತಿಯನ್ನು ರಚಿಸಿ ಅತಿ ಶೀಘ್ರವಾಗಿ ಕ್ರಮವನ್ನು ಕೈಗೊಳ್ಳಬೇಕೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಹಲವಾರು ವಿಷಯಗಳು ವಿಚಾರಣ ಸಮಿತಿಗಳಲ್ಲಿವೆ. ಅವುಗಳು ಒಂದೂ ಒಂದೂವರೆ ವರ್ಷವಾದರೂ ಅಂತ್ಯಗೊಂಡಿರುವುದಿಲ್ಲ. ಆದ್ದರಿಂದ ಶೀಘ್ರವಾಗಿ ವಿಚಾರಣೆಗಳನ್ನು ತಾರ್ಕಿಕವಾಗಿ ಅಂತ್ಯಗೊಳಿಸಿ, ಸಮಿತಿಗಳು ತೆಗೆದುಕೊಂಡಿರುವಂತಹ ನಿರ್ಣಯಗಳನ್ನು ಸಿಂಡಿಕೇಟ್‌ಗೆ ತಂದರೆ ಅವುಗಳ ಸಾಧಕ-ಬಾಧಕಗಳನ್ನು ಚರ್ಚಿಸಿ ಅಂತ್ಯಗೊಳಿಸಬಹುದು. ಆದರೆ ಒಂದೇ ವಿಷಯವನ್ನು ವರ್ಷಾನುಗಟ್ಟಲೆ ನಡೆಸುವುದು ಉಚಿತವಲ್ಲವೆಂದು ತಿಳಿಸುತ್ತಾ, ಶ್ರೀ ಶಿವಕುಮಾರ್ ಅವರ ವಿಚಾರಣೆಯ ವಿಷಯವು ಇನ್ನೂ ಇತ್ಯರ್ಥಗೊಳ್ಳದೆ ಇರುವುದರ ಬಗ್ಗೆ ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಚಾರಣಾ ಸಮಿತಿಗಳಲ್ಲಿ ಅಧಿಕಾರಿಗಳು, ನ್ಯಾಯಾಧೀಶರು, ವಕೀಲರು ಇರುತ್ತಾರೆ. ಇಂತಹ ಸಂದರ್ಭದಲ್ಲಿ ಅವರು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತಾರೆ. ಹಾಗೆಯೇ ಮೂರು ತಿಂಗಳಿನಲ್ಲಿ ವಿಚಾರಣೆಯನ್ನು ಸಂಪೂರ್ಣಗೊಳಿಸಿ ಎಂದಿದ್ದರು ಅವುಗಳು ಸಂಪೂರ್ಣ ಗೊಂಡಿರುವುದಿಲ್ಲ. ಜೊತೆಗೆ ಶಿವಕುಮಾರ್‌ರವರ ವಿಚಾರಣೆ ತುಂಬಾ ಕ್ಲಿಷ್ಟಕರವಾಗಿದ್ದು, ಸದರಿ ವಿಚಾರಣೆಗೆ ಎಲ್ಲಾ ಯೋಜನೆಯನ್ನು ರೂಪಿಸಲಾಗಿದೆ. ಹೊಸದಾಗಿ ಬಂದಿರುವ ಕುಲಸಚಿವರ ಸಮ್ಮುಖದಲ್ಲಿ ಇನ್ನಿತರ ಅಧಿಕಾರಿಗಳು ಹಾಗೂ ಯುವರಾಜ ಕಾಲೇಜಿನ ಪ್ರಾಂಶುಪಾಲರರೊಂದಿಗೆ ಸಭೆಯನ್ನು ನಡೆಸಿ, ಮುಕ್ತವಾಗಿ ಚರ್ಚಿಸಿ ಇದರ ಬಗ್ಗೆ ಯಾವ ರೀತಿ ಕ್ರಮಕೈಗೊಳ್ಳಬೇಕೆಂಬುದರ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದಾಗಿ ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ, ಸದರಿ ವಿಷಯದಲ್ಲಿ ಆಗಲೇ ಇಬ್ಬರು ನೌಕರರು ನಿಧನರಾಗಿರುತ್ತಾರೆ. ಡಾ. ದೇವರಾಜೇಗೌಡರು ಒಬ್ಬರೇ ಉಳಿದಿರುವುದು. ಆದ್ದರಿಂದ ಸದರಿ ವಿಷಯದಲ್ಲಿ ಆಸ್ತೆ ವಹಿಸಿ ಶೀಘ್ರವಾಗಿ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನ್ಯಾಯಾಧೀಶರನ್ನು ವಿಚಾರಣಾ ಸಮಿತಿಗೆ ನೇಮಿಸುವ ಬದಲು ಯಾರಾದರೂ ವಿಷಯತಜ್ಞರನ್ನು ನೇಮಿಸಿ, ಶೀಘ್ರವಾಗಿ ವಿಚಾರಣೆಯನ್ನು ನಡೆಸುವಂತಹ ಕೆಲಸವನ್ನು ಮಾಡುವುದಾಗಿ ತಿಳಿಸಿದರು. ಪ್ರಾಂಶುಪಾಲರನ್ನು ಜೇಷ್ಠತೆಯ ಆಧಾರದ ಮೇಲೆ ನೇಮಕ ಮಾಡಲಾಗುವುದು. ಡಾ. ದೇವರಾಜೇಗೌಡರನ್ನು ಮಹಾರಾಜ ಕಾಲೇಜಿಗೂ, ಡಾ. ಎಂ. ಮಹಾದೇವಮೂರ್ತಿಯವರನ್ನೂ ಯುವರಾಜ ಕಾಲೇಜಿಗೂ ಪ್ರಾಂಶುಪಾಲರನ್ನಾಗಿ ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಡಾ. ವಾಸಂತಿ, ಪ್ರಾಧ್ಯಾಪಕರು, ಹಿಂದಿ ಅಧ್ಯಯನ ವಿಭಾಗ ಇವರ ಮೇಲೆ ಚೆಕ್‌ಬೌನ್ಸ್ ಕೇಸ್‌ಲ್ಲಿ ವಿಚಾರಣಾ ಸಮಿತಿಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಆದರೆ ಎಲ್ಲಾ ವಿಚಾರಣೆಗಳೂ 6 ತಿಂಗಳವರೆಗೆ ನಡೆದರೆ ಅವರುಗಳು ಅರ್ಧ ಸಂಬಳವನ್ನು ತೆಗೆದುಕೊಂಡು ಅರಾಮಾಗಿರುತ್ತಾರೆ. ಆದರೆ ವಿಶ್ವವಿದ್ಯಾನಿಲಯದಲ್ಲಿ ಮೊದಲೇ ಪ್ರಾಧ್ಯಾಪಕರುಗಳ ಕೊರತೆ ಇರುವುದರಿಂದ, ಬೇಗ ವಿಚಾರಣೆಗಳನ್ನು ಮುಗಿಸುವಲ್ಲಿ ಕಾರ್ಯತತ್ಪರರಾಗಬೇಕೆಂದು ತಿಳಿಸಿದರು.

ಡಾ. ಸಿ. ಬಸವರಾಜು ಅವರು ಮಾತನಾಡಿ, ಆದಷ್ಟು ವಿಚಾರಣೆಗಳೆಲ್ಲವೂ ತುರ್ತಾಗಿ ನಡೆಯುವಂತೆ ಹಾಗೂ ವಿಚಾರಣಾ ಸಮಿತಿಗಳನ್ನು ಮಾಡಿ, ತದನಂತರ ಸಿಂಡಿಕೇಟ್‌ಗೆ ತರುವ ಬದಲು ಸಿಂಡಿಕೇಟ್ ಸಭೆಯಲ್ಲೇ ವಿಷಯಗಳು ಇತ್ಯರ್ಥವಾಗುವಂತೆ ಕ್ರಮವಹಿಸಲು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಸಿಂಡಿಕೇಟ್ ಸಭೆಗೆ ಕೆಲವೊಂದು ವಿಷಯಗಳನ್ನು ತರುವಂತೆ ಮನವಿಯನ್ನು ಸಲ್ಲಿಸಲಾಗಿದ್ದು, ಕೆಲವೊಂದು ಜ್ವಲಂತ ಸಮಸ್ಯೆಗಳಿರುವುದರಿಂದ ಮುಂದಿನ ಸಿಂಡಿಕೇಟ್ ಸಭೆಗೆ ವಿಷಯವನ್ನು ತರುವಂತೆ ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ದಿನಾಂಕ: 1.02.2025ರಂದು ಮಾನ್ಯ ಕುಲಪತಿಗಳಾದ ತಮಗೆ ಹಾಗೂ ಕುಲಸಚಿವರಿಗೆ ಡಾ. ಸುಷ್ಮಾರವರು ಹೆಚ್‌ಆರ್‌ಎ ಹಣವನ್ನು ದುರುಪಯೋಗ ಮಾಡಿಕೊಂಡಿರುವುದರ ಬಗ್ಗೆ ಮನವಿಯನ್ನು ಸಲ್ಲಿಸಲಾಗಿದೆ ಎಂಬುದರ ಬಗ್ಗೆ ಸಭೆಯ ಗಮನಕ್ಕೆ ತಂದರು.

ಶ್ರೀ ಮಹಾದೇಶು ಅವರು ಮಾತನಾಡಿ, ಡಾ. ಸುಷ್ಮಾ ಆಗಲಿ, ಬೇರೆ ಯಾರೇ ಆಗಲಿ ತಪ್ಪು ಎಸಗಿರುವಂತಹದನ್ನು ಪರಿಶೀಲಿಸಿ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಂಚನೆ ಎಸಗಿರುವವರ ವಿರುದ್ಧ ವಿಚಾರಣೆ ನಡೆಸಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮಂಡಿಸುವುದಾಗಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಹೆಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ಪ್ರತಿದಿನ ಎಸ್‌ಬಿಐ ಖಾತೆಗೆ ಹಣವನ್ನು ವರ್ಗಾವಣೆ ಮಾಡಲು ತೀರ್ಮಾನಿಸಲಾಗಿತ್ತು. ಅದರಂತೆ ಹಣಕಾಸು ಅಧಿಕಾರಿಗಳಾದ ತಾವು ಏನು ಕ್ರಮಕೈಗೊಂಡಿರುವಿರಿ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಹೆಚ್‌ಡಿಎಫ್‌ಸಿ ಬ್ಯಾಂಕ್ ನವರಿಗೆ ಸದರಿ ವಿಷಯದ ಬಗ್ಗೆ ಮಾತನಾಡಿದ್ದು, ಪ್ರತಿದಿನ ಬ್ಯಾಂಕಿಗೆ ಸಂದಾಯವಾಗುವ ಹಣವನ್ನು ಎಸ್‌ಬಿಐ ಖಾತೆಗೆ ವರ್ಗಾವಣೆ ಮಾಡಬೇಕಾದಲ್ಲಿ, ಎಂಒಯು ಅನ್ನು ರದ್ದುಪಡಿಸಿ, ಸಾಫ್ಟ್‌ವೇರ್‌ಅನ್ನು ನಿಷ್ಕ್ರಿಯಗೊಳಿಸುವುದಾಗಿ ತಿಳಿಸಿರುತ್ತಾರೆ. ಜೊತೆಗೆ ಅವರು ಸಾಫ್ಟ್‌ವೇರ್ ಡೆವಲಪ್ ಮಾಡಿ ಕಸ್ಟಮೈಸ್ ಮಾಡಿ ನೀಡಿರುವುದರಿಂದ ತುಂಬಾ ಅನುಕೂಲವಾಗಿದೆ. ಪಿಜಿ Entrance Exam ಪರೀಕ್ಷಾ ಶುಲ್ಕವನ್ನು ಆನ್‌ಲೈನ್‌ನಲ್ಲಿ ಸಂಗ್ರಹಣೆ ಮಾಡುವುದಕ್ಕಾಗಿ ರೂ. 19.00 ಲಕ್ಷ ಕೊಟ್ಟು ಸಾಫ್ಟ್‌ವೇರ್‌ಅನ್ನು ಮಾಡಿಸಲಾಗಿದೆ. ಆದ್ದರಿಂದ ಅವರು ಉಚಿತವಾಗಿ ಇಂಜಿನಿಯರಿಂಗ್ ಕಾಲೇಜಿಗೆ ವಿದ್ಯಾರ್ಥಿಗಳು ಶುಲ್ಕ ಇತರೆ ಪಾವತಿಸಬೇಕಾದ ಮೊತ್ತಕ್ಕೆ ಅನುಕೂಲವಾಗುವಂತಹ ಸಾಫ್ಟ್‌ವೇರ್‌ಅನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಆದರೆ ನಾವು ಪ್ರತಿದಿನ ಅವರಿಂದ ಹಣವನ್ನು ಬೇರೆ ಖಾತೆಗೆ ವರ್ಗಾಯಿಸಿದ್ದಲ್ಲಿ ಅವರ ಬ್ಯಾಂಕಿನ ಖಾತೆಯಲ್ಲಿ ಹಣ ಉಳಿಯುವುದಿಲ್ಲವಾದ್ದರಿಂದ ಅವರು ಎಂಒಯುಅನ್ನು ರದ್ದು ಮಾಡುವುದಾಗಿಯೂ ಹಾಗೂ ಸಾಫ್ಟ್‌ವೇರ್‌ಅನ್ನು ವೈಂಡ್‌ಅಪ್ ಮಾಡುವುದಾಗಿಯೂ ತಿಳಿಸಿರುತ್ತಾರೆ.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವಾದಂತೆ ಕ್ರಮವಹಿಸಬೇಕಾಗುತ್ತದೆ. ಇದು ಆಡಳಿತಾತ್ಮಕವಾದ ವಿಷಯ. ಜೊತೆಗೆ ನಮ್ಮ ಕಾಲೇಜಿನಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ ಎಂಬುದು ನಮಗೆ ತಿಳಿದಿದ್ದಾಗ ಅಕೌಂಟ್ ಇಡುವುದು ಕಷ್ಟವಾಗುವುದಿಲ್ಲ, ಸಾಫ್ಟ್‌ವೇರ್‌ನ ಅವಶ್ಯಕತೆಯೂ ಬೇಕಾಗುವುದಿಲ್ಲವೆಂದು ತಿಳಿಸಿದರು. ಜೊತೆಗೆ ವಾರ್ಷಿಕವಾಗಿ ನಾವು ರೂ. 12.00 ಕೋಟಿಗಳ ವ್ಯವಹಾರವನ್ನು ಮೆ. ಕೊಟ್ಯಾಕ್ ಮಹಿಂದ್ರ ಬ್ಯಾಂಕ್‌ನಲ್ಲಿ ಮಾಡಿದ್ದರೆ, ನಮಗೆ ವರ್ಷವಾರು ರೂ.1.00 ಕೋಟಿಯಷ್ಟು ಬಡ್ಡಿ ಹಣ ದೊರಕುತ್ತಿತ್ತು. ಆದರೆ ಇವರು ಇಟ್ಟಿರುವಂತಹ ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಯಾವುದೇ ಆದಾಯವು ಬರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಣಕಾಸು ಅಧಿಕಾರಿಗಳಿಗೆ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವಾದ ವಿಷಯವನ್ನು ಹೆಚ್‌ಡಿಎಫ್‌ಸಿ ಬ್ಯಾಂಕ್‌ನವರಿಗೆ ತಿಳಿಸಿ, ಪ್ರತಿದಿನ ಹಣವನ್ನು ವರ್ಗಾವಣೆ ಮಾಡಲು ಆಗದಿದ್ದಲ್ಲಿ ಎಷ್ಟು ದಿನದಲ್ಲಿ ಹಣವನ್ನು ವರ್ಗಾವಣೆ ಮಾಡಬಹುದು ಎಂದು ವಿಚಾರಿಸಿದ್ದೀರಾ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಹೆಚ್‌ಡಿಎಫ್‌ಸಿ ಬ್ಯಾಂಕ್‌ನವರನ್ನು ಕರೆದು ಮಾತನಾಡಲಾಗಿದೆ. ಬ್ಯಾಂಕ್‌ನವರು ಪ್ರತಿದಿನ ಹಣವನ್ನು ವರ್ಗಾವಣೆ ಮಾಡಲು ಸಾಧ್ಯವಾಗುವುದಿಲ್ಲ, ಆದರೆ ನೀವು ಪ್ರತಿದಿನ ಹಣವನ್ನು ವರ್ಗಾವಣೆ ಮಾಡಬೇಕು ಎಂದು ತಿಳಿಸಿದ್ದಲ್ಲಿ, ಎಂಓಯು ಅನ್ನು ರದ್ದುಗೊಳಿಸಿ, ಸಾಫ್ಟ್‌ವೇರ್‌ಅನ್ನು ವೈಂಡ್‌ಅಪ್ ಮಾಡುವುದಾಗಿ ತಿಳಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಬ್ಯಾಂಕ್‌ನವರು ಪ್ರತಿದಿನ ಹಣವನ್ನು ವರ್ಗಾವಣೆ ಮಾಡುವುದಿಲ್ಲವೆಂದಾದಲ್ಲಿ, ಬಡ್ಡಿಯನ್ನಾದರೂ ನೀಡಬೇಕಲ್ಲವೆ? ಆದ್ದರಿಂದ ಎಷ್ಟು ಶೇಕಡವಾರು ಬಡ್ಡಿ ಹಣವನ್ನು ನೀಡುತ್ತಾರೆ ಎಂಬುದನ್ನಾದರೂ ಕೇಳಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳು ಹೆಚ್‌ಡಿಎಫ್‌ಸಿ ಬ್ಯಾಂಕ್‌ನವರನ್ನು ಕರೆಸಿ ಮಾತನಾಡುವಂತೆ ತಿಳಿಸಿದರು. ಜೊತೆಗೆ ಎಂಓಯುಅನ್ನು ರದ್ದುಗೊಳಿಸುವುದು ಉಚಿತವಲ್ಲ, ಆದ್ದರಿಂದ ಏನಾದರೂ ಮಾರ್ಪಾಡುಗಳನ್ನು ಮಾಡಬಹುದೇ ಎಂಬುದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಎರಡು ದಿನಗಳ ಕಾಲ ಅವರ ಖಾತೆಯಲ್ಲಿ ಹಣವನ್ನು ಇಟ್ಟುಕೊಂಡು ನಂತರ ಎಸ್‌ಬಿಐ ಖಾತೆಗೆ ವರ್ಗಾಯಿಸಬಹುದು ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ಎಸ್‌ಬಿ ಖಾತೆಯಲ್ಲಾಗಲಿ ಅಥವಾ ಎಫ್‌ಡಿಯಲ್ಲಾಗಲಿ ಹಣವನ್ನು ತೊಡಗಿಸಿದಾಗ ಒಂದು ದಿನಕ್ಕೂ ಬರುವ ಬಡ್ಡಿ ಹಣದಿಂದ ವಿಶ್ವವಿದ್ಯಾನಿಲಯಕ್ಕೆ ಅನುಕೂಲವಾಗುತ್ತದೆ ಎಂಬುದು ಎಲ್ಲಾ ಸಿಂಡಿಕೇಟ್ ಸದಸ್ಯರುಗಳ ಅಭಿಪ್ರಾಯವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಮೊದಲೇ ತಿಳಿಸಿದಂತೆ ಕೊಟಾಕ್ ಬ್ಯಾಂಕ್ ಅಥವಾ ಐಡಿಎಫ್‌ಸಿ ಬ್ಯಾಂಕ್‌ನಲ್ಲಿ ತಾನೇ ಖುದ್ದಾಗಿ ವಿಚಾರಿಸಲಾಗಿದ್ದು, ಬಡಿ ಹಣವನ್ನು ಹೆಚ್ಚು ಕೊಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಅನುಕೂಲವಾಗುತ್ತದೆ. ಹಾಗೇ ದಿನಾಂಕ: 21.12.2024ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಏನಾದರೂ ಕ್ರಮಕೈಗೊಂಡಿದ್ದೀರಾ ಎಂದು ಹಣಕಾಸು ಅಧಿಕಾರಿಗಳನ್ನು ಕೇಳಿದರು. ಜೊತೆಗೆ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಸದರಿ ವಿಷಯದ ಬಗ್ಗೆ ಸುದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ನಿರ್ಣಯದಂತೆ ಕ್ರಮವನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹೆಚ್‌ಆರ್‌ಎ ಅನ್ನು ೮೦ ಮಂದಿ ಉದ್ಯೋಗಿಗಳು ದುರುಪಯೋಗಪಡಿಸಿಕೊಂಡಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಇದರಿಂದ ವಿಶ್ವವಿದ್ಯಾನಿಲಯಕ್ಕೆ ಕೋಟ್ಯಾಂತರ ರೂ.ಗಳು ನಷ್ಟವಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ತುರ್ತಾಗಿ ಕ್ರಮಕೈಗೊಳ್ಳಬೇಕೆಂದು ತಿಳಿಸುತ್ತಾ, ಸದರಿ ವಿಷಯಕ್ಕೆ ಸಂಬಂಧಿಸಿದ ಸಂಪೂರ್ಣ ದಾಖಲೆಗಳನ್ನು ಮಾನ್ಯ ಕುಲಪತಿಗಳಿಗೆ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನೇಕ ಪ್ರಾಧ್ಯಾಪಕರುಗಳು ನಿವೃತ್ತಿ ಹೊಂದಿದ್ದಾರೆ. ಆದರೆ ಕೆಲವು ಪ್ರಾಧ್ಯಾಪಕರುಗಳು 5-6 ವರ್ಷಗಳಿಂದ ನಿವೃತ್ತಿ ಹೊಂದಿದ್ದರೂ ಸಹ ವಿಭಾಗದ ಕೊಠಡಿಗಳನ್ನು ನಿವೃತ್ತ ಪ್ರಾಧ್ಯಾಪಕರುಗಳೇ ಉಳಿಸಿಕೊಂಡಿರುತ್ತಾರೆ. ಸದರಿ ವಿಷಯದ ಬಗ್ಗೆ ಹಲವಾರು ಬಾರಿ ಮಾನ್ಯ ಕುಲಪತಿಗಳ ಗಮನಕ್ಕೆ ತಂದಿದ್ದರೂ ಸಹ ಈ ಪರಂಪರೆ ಮುಂದುವರಿಯುತ್ತಲೇ ಇದೆ. ಆದಕಾರಣ ತುರ್ತಾಗಿ ವಿಷಯದ ಬಗ್ಗೆ ಗಮನಹರಿಸಿ ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಧ್ಯಾಪಕರು ನಿವೃತ್ತಿ ಹೊಂದಿದ ಸಮಯದಲ್ಲಿ ವಿಭಾಗದ ಅಧ್ಯಕ್ಷರಾಗಿರುವಂತಹವರು ಕೊಠಡಿಗಳ ಕೀಗಳನ್ನು ತೆಗೆದುಕೊಂಡು No Due ನೀಡಬೇಕಾಗುತ್ತದೆ. ಜೊತೆಗೆ ನಿವೃತ್ತಿ ಹೊಂದಿದ್ದಂತಹ ಪ್ರಾಧ್ಯಾಪಕರುಗಳು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು ಬಾಕಿ ಇರುವುದರಿಂದ ಕೊಠಡಿಯ ಅವಶ್ಯಕತೆ ಇರುತ್ತದೆ ಎಂದು ಪತ್ರವನ್ನು ನೀಡುವುದರಿಂದ ಈ ರೀತಿಯ

ತೊಂದರೆಗಳು ಉಂಟಾಗುತ್ತಿದೆ ಎಂದು ಸಭೆಗೆ ತಿಳಿಸುತ್ತಾ, ಸದರಿ ವಿಷಯದ ಬಗ್ಗೆ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಡಾ. ಜಯಕುಮಾರಿಯವರು ಮಾತನಾಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕಾದಲ್ಲಿ ನಿವೃತ್ತ ಪ್ರಾಧ್ಯಾಪಕರುಗಳಿಗೆ ಕೊಠಡಿಯ ಅವಶ್ಯಕತೆ ಇರುತ್ತದೆ. ಆದ್ದರಿಂದ ಅವರಿಗೆ ಕೊಠಡಿಗಳನ್ನು ನೀಡಬಹುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಪ್ರಾಧ್ಯಾಪಕರು ಕೊಠಡಿಯನ್ನು ಖಾಲಿ ಮಾಡಲು ನಿಯಮವಿರುತ್ತದೆ. ಅದರ ದಾಖಲೆಯೂ ನನ್ನ ಬಳಿ ಇದೆ ಎಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜು ಅವರು ಮಾತನಾಡಿ, ಕುಲಸಚಿವರಿಗೆ ದೈಹಿಕ ಶಿಕ್ಷಣ ವಿಭಾಗದ ವಿದ್ಯಾರ್ಥಿಗಳು ಇಂಟರ್‌ನಲ್ ಮಾರ್ಕ್ಸ್‌ಕಾರ್ಡ್‌ನಲ್ಲಿ ತಿದ್ದುಪಡಿ ಮಾಡಿರುವುದರ ಬಗ್ಗೆ ಮನವಿಯನ್ನು ನೀಡಿದ್ದು, ಇದರ ಬಗ್ಗೆ ಯಾವ ರೀತಿಯ ಕ್ರಮವನ್ನು ಕೈಗೊಳ್ಳಲಾಗಿದೆ. ಹಾಗೂ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರನ್ನು ಸಿಂಡಿಕೇಟ್ ಗಮನಕ್ಕೆ ತರದೆ ನೇಮಕ ಮಾಡಿದ್ದೀರಿ, ಹಾಗೆಯೇ ಹಲವಾರು ಅಧಿಕಾರಗಳನ್ನು ಒಬ್ಬರಿಗೆ ನೀಡುವುದರ ಬದಲು ಅವಕಾಶ ವಂಚಿತರಿಗೆ ಅಧಿಕಾರಗಳ ವಿಸ್ತರಣೆಯಾಗಲಿ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಇಂಟರ್ನಲ್ ಮಾರ್ಕ್ಸ್‌ಕಾರ್ಡ್ ತಿದ್ದುಪಡಿಯಾಗಿರುವುದರ ಬಗ್ಗೆ ಪರಿಶೀಲನೆ ಮಾಡುವುದಾಗಿಯೂ, ಹಾಗೆಯೇ ಪ್ರಭಾರ ನಿರ್ದೇಶಕರನ್ನು ಕುಲಪತಿಗಳೇ ನೇಮಿಸಬಹುದಾಗಿರುವುದರಿಂದ ಪ್ರಭಾರ ನಿರ್ದೇಶಕರನ್ನು ದೈಹಿಕ ಶಿಕ್ಷಣ ವಿಭಾಗಕ್ಕೆ ನೇಮಿಸಲಾಗಿದೆ. ಜೊತೆಗೆ ಖಾಯಂ ಆಗಿ ನಿರ್ದೇಶಕರನ್ನು ನೇಮಿಸುವಾಗ ಸಿಂಡಿಕೇಟ್ ಸಭೆಯ ಗಮನಕ್ಕೆ ತರುವುದಾಗಿ ತಿಳಿಸಿದರು. ಜೊತೆಗೆ ಅಧಿಕಾರ ಹಂಚಿಕೆಯ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು.

ಡಾ. ಶಿಲ್ಪಾ ಜೆ. ಅವರು ಮಾತನಾಡಿ ಓಬಿಸಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನವೆಂಬರ್ 2024ರಿಂದ ನೀಡಿಲ್ಲದಿರುವುದರ ಬಗ್ಗೆ ಸಭೆಯ ಗಮನಕ್ಕೆ ತರುತ್ತಾ, ಹುಂಡಿಯು ಹಣಕಾಸು ವಿಭಾಗಕ್ಕೆ ಜನವರಿ ಮಾಹೆಯಲ್ಲಿ ಹೋಗಿದ್ದರೂ ಸಹ ಇನ್ನೂ ಅವರಿಗೆ ಶಿಷ್ಯವೇತನವನ್ನು ಬಿಡುಗಡೆ ಮಾಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಡಾ. ಮಹೇಶ್ ಟಿ.ಬಿ. ಯವರು ಮಾತನಾಡಿ ಡಿಜಿಲಾಕರ್ ಮಾರ್ಕ್ಸ್‌ಕಾರ್ಡ್‌ಗೆ ರೂ. 5000/-ಗಳಾಗಿರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಹೊರೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿದ್ಯಾರ್ಥಿಗಳು ಮಾರ್ಕ್ಸ್‌ಕಾರ್ಡ್ ಬೇಕಾದಲ್ಲಿ ಅವರೇ ಪ್ರಿಂಟ್‌ಔಟ್ ತೆಗೆದುಕೊಳ್ಳಬಹುದು. ಹೊರ ದೇಶದಲ್ಲಿ ವ್ಯಾಸಂಗ ಮಾಡಲು ಹೋಗುವಂತಹ ವಿದ್ಯಾರ್ಥಿಗಳು ಟ್ರಾನ್ಸ್‌ಕ್ರಿಪ್ಟ್‌ಗೆ ರೂ. 5,000/-ಗಳನ್ನು ಕಟ್ಟಿದ್ದಲ್ಲಿ ಟ್ರಾನ್ಸ್‌ಕ್ರಿಪ್ಟ್ ಕೊಡುವುದಾಗಿ ತಿಳಿಸಿದರು.

ಡಾ. ಶಿಲ್ಪಾ ಜೆ. ಅವರು ಮಾತನಾಡಿ, ಡಾ. ಮೀರಾ, ಸಹ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ ಅವರಿಗೆ ಪ್ರಾಧ್ಯಾಪಕರಾಗಿ ಬಡ್ತಿಯ ನೀಡುವ ಬಗ್ಗೆ ಮಾಹಿತಿ ನೀಡುವಂತೆ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಡಾ. ಮೀರಾ ಇವರಿಗೆ ಪ್ರಾಧ್ಯಾಪಕರಾಗಿ ಬಡ್ತಿ ನೀಡುವ ಸಂಬಂಧ ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ ಡಾ. ಎಂ.ಎಸ್. ಕೃಷ್ಣ, ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಇವರು ದಿನಾಂಕ: 18.01.2025 ರಂದು ನಡೆದ 105ನೇ ಘಟಿಕೋತ್ಸವದಲ್ಲಿ ಭಾಗವಹಿಸದೆ, ಕಾರ್ಯಾಗಾರವನ್ನು ನಡೆಸಿರುವುದು ಎಷ್ಟರ ಮಟ್ಟಿಗೆ ಸರಿ, ಡಾ. ಎಂ.ಎಸ್. ಕೃಷ್ಣ ಅವರು ವಿಶ್ವವಿದ್ಯಾನಿಲಯಕ್ಕೆ, ಕುಲಪತಿಗಳಿಗೆ ಹಾಗೂ ಕುಲಸಚಿವರಿಗೆ ಮಾಡಿರುವಂತಹ ಅವಮಾನವಾಗಿರುತ್ತದೆ. ಆದ್ದರಿಂದ ಇವರ ಮೇಲೆ ಶಿಸ್ತು ಕ್ರಮಕೈಗೊಳ್ಳಬೇಕೆಂದು ಸಭೆಯಲ್ಲಿ ಆಗ್ರಹಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಕಾರ್ಯಾಗಾರವನ್ನು ನಡೆಸಲು ಕುಲಪತಿಗಳು ಮೌಖಿಕವಾಗಿ ಆದೇಶವನ್ನು ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ತಾವು ಸದರಿ ವಿಷಯದ ಬಗ್ಗೆ

ಕ್ರಮಕೈಗೊಳ್ಳಬೇಕೆಂದು ತಿಳಿಸುತ್ತಾ, ಮುಂದೆ ಈ ರೀತಿಯ ಘಟನೆಗಳು ಮರುಕಳಿಸದಂತೆ ಕ್ರಮವಹಿಸಬೇಕೆಂದು ತಿಳಿಸಿದರು.

ಡಾ. ಜೆ. ಶಿಲ್ಪಾ ಅವರು ಮಾತನಾಡಿ, ಸೆಕ್ಯೂರಿಟಿಗಳಾಗಿ ಕಾರ್ಯನಿರ್ವಹಿಸುತ್ತಿರುವಂತಹ ಸಿಬ್ಬಂದಿಗಳಿಗೆ ರೂ. 16,000/-ಗಳ ವೇತನ ಹಾಗೂ 4 ದಿನಗಳ ರಜೆ ಎಂದಿರುತ್ತದೆ. ಆದರೆ ಅವರುಗಳಿಗೆ ನೀಡುತ್ತಿರುವ ವೇತನ ರೂ. 12,000/- ಹಾಗೂ ರಜೆಯನ್ನು ಸರಿಯಾಗಿ ನೀಡುತ್ತಿಲ್ಲವೆಂದು ಮನವಿ ಸಲ್ಲಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ಸೆಕ್ಯೂರಿಟಿ ಸಿಬ್ಬಂದಿಗಳನ್ನು ನೇಮಿಸಿರುವುದು ವಿಶ್ವವಿದ್ಯಾನಿಲಯವಲ್ಲ, ಅವರ ಏಜೆನ್ಸಿಯವರು ಕಮಿಟ್‌ಮೆಂಟ್ ಮಾಡಿಕೊಂಡೇ ನೇಮಕಾತಿ ಮಾಡಿಕೊಂಡಿರುತ್ತಾರೆ. ಮನವಿಯನ್ನು ಸಲ್ಲಿಸಿರುವುದರಿಂದ ಏಜೆನ್ಸಿಯವರನ್ನು ಕರೆದು ಮಾತನಾಡುವುದಾಗಿ ತಿಳಿಸಿದರು.

ಡಾ. ಆಂಥೋಣಿ ಪೌಲ್ ರಾಜ್ ಸಿ. ಅವರು ಮಾತನಾಡಿ, ಕಳೆದ ಒಂದು ವರ್ಷದಿಂದ ಎಲ್ಲಾ ಬಿ.ಎಡ್. ಕಾಲೇಜುಗಳ ಪ್ರಾಂಶುಪಾಲರ ಪರವಾಗಿ ಹಾಗೂ ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ದೆಹಲಿಯಲ್ಲಿ ನಡೆದಂತಹ ರಾಷ್ಟ್ರೀಯ ಕಾರ್ಯಗಾರದಲ್ಲಿ ಭಾಗವಹಿಸಿದ್ದೆ. ಅದರಲ್ಲಿ NCTE ಹಾಗೂ UGC ಗಳ ರೆಗ್ಯೂಲೇಷನ್ಸ್ ಅನುಸರಣೆ ಮಾಡುತ್ತಿರುವುದು ಕೆಲವು ವಿಶ್ವವಿದ್ಯಾನಿಲಯಗಳು. ಕೆಲವೊಂದು ರಾಜ್ಯಗಳಲ್ಲಿ ಈ ಕ್ರಮವನ್ನು ಅನುಸರಿಸುತ್ತಿಲ್ಲ. ಮೈಸೂರು ವಿಶ್ವವಿದ್ಯಾನಿಲಯವು NCTE ಹಾಗೂ UGCಗಳ ರೆಗ್ಯೂಲೇಷನ್ಸ್ ಅನುಸರಣೆ ಮಾಡುತ್ತಿರುವುದರಲ್ಲಿ ಅಗ್ರಗಣ್ಯವಾಗಿದೆ ಎಂದು ತಿಳಿಸಿದರು. ಇದಕ್ಕೆ ವಿಶ್ವವಿದ್ಯಾನಿಲಯಕ್ಕೆ ಆಭಾರಿಯಾಗಿದ್ದೇನೆ ಎಂದು ತಿಳಿಸಿದರು.

ಅಂತಿಮವಾಗಿ ಮಾನ್ಯ ಕುಲಸಚಿವರು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೂಕ್ತ ಸಲಹೆ ಮತ್ತು ಸಹಕಾರಗಳನ್ನು ನೀಡಿರುವ ಸಭಾಧ್ಯಕ್ಷರಿಗೆ ಹಾಗೂ ಸದಸ್ಯರುಗಳಿಗೆಲ್ಲಾ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ** | **ಕುಲಪತಿ ಹಾಗೂ ಅಧ್ಯಕ್ಷರು**